ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ–5, ಸಂಚಿಕೆ–3 ತ್ರೈಮಾಸಿಕ, ಜುಲೈ – ಸೆಪ್ಟೆಂಬರ್ 2018 ಪುಟಗಳು-12



# ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ



ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ 23.05.2018 ರಂದು ಪ್ರಮಾಣವಚನ ಸ್ವೀಕರಿಸಿದ ಎಚ್. ಡಿ. ಕುಮಾರಸ್ವಾಮಿ ಅವರದು ರಾಜಕೀಯವಾಗಿ ಪ್ರಬುದ್ಧ ವ್ಯಕ್ತಿತ್ವ.

ಈ ಹಿಂದೆ ಜೆಡಿಸ್ – ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ 2006ರ ಫೆಬ್ರವರಿಯಲ್ಲಿ ಪ್ರಮಾಣವಚನ ಸ್ವೀಕರಿಸಿದ ಅವರು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿ ಮುಖ್ಯಮಂತ್ರಿಯಾದ ಹೆಗ್ಗಳಿಕೆ ಪಡೆದಿದ್ದರು.

ಹೊಳೆನರಸೀಪುರ ತಾಲ್ಲೂಕು ಹರದನಹಳ್ಳಿಯಲ್ಲಿ ಎಚ್. ಡಿ. ದೇವೇಗೌಡ – ಚನ್ನಮ್ಮ ದಂಪತಿಯ ಮೂರನೇ ಮಗನಾಗಿ 1959ರ ಡಿಸೆಂಬರ್ 16 ರಂದು ಜನಿಸಿದ ಅವರು ಶಾಲಾ ದಿನಗಳ ಬಹುಭಾಗವನ್ನು ಪಟ್ಟಣದ ಕೋಟೆ ಬೀದಿಯಲ್ಲಿನ ಬಾಡಿಗೆ ಮನೆಯಲ್ಲಿ ಕಳೆದರು, ದೇವೇಗೌಡರದ್ದು ಆರು ಮಕ್ಕಳ ತುಂಬು ಸಂಸಾರ. ಸಕ್ರಿಯ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದ ಅವರು ಮಕ್ಕಳಿಗೆ ಶಿಕ್ಷಣ ಕೊಡಿಸುವ ಸಲುವಾಗಿ ಹುಟ್ಟೂರು ಹರದನಹಳ್ಳಿಯಿಂದ ಕುಟುಂಬವನ್ನು ಹೊಳೆನರಸೀಪುರದ ಕೋಟೆ ಬೀದಿಯ ಬಾಡಿಗೆ ಮನೆಗೆ ಸ್ಥಳಾಂತರಿಸಿದ್ದರು. ಕುಮಾರಸ್ವಾಮಿ 5 ರಿಂದ 7ನೇ ತರಗತಿವರೆಗೆ ಪಾರ್ಕ್ ಪಕ್ಕದಲ್ಲಿರುವ ಬಾಲಕರ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದಾರೆ. 8ನೇ ತರಗತಿಯನ್ನು ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ, 9ನೇ ತರಗತಿಯನ್ನು ಹಾಸನದ ಸಂತ ಜೋಸೆಫರ ಶಾಲೆಯಲ್ಲಿ, 10ನೇ ತರಗತಿಯನ್ನು ಬೆಂಗಳೂರಿನ ಜಯನಗರದಲ್ಲಿರುವ ಎಂಇಎಸ್ ಶಾಲೆಯಲ್ಲಿ ಪೂರೈಸಿದ್ದಾರೆ.

1972ರ ವೇಳೆಗೆ ರಾಜಕೀಯದಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದ ಗೌಡರು, ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲು ಹೊಳೆನರಸೀಪುರದಿಂದ ಬೆಂಗಳೂರಿಗೆ ಸ್ಥಳಾಂತರಗೊಂಡರು.

ಜಯನಗರದಲ್ಲಿರುವ ವಿಜಯಾ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಪಿಯುಸಿ, ನ್ಯಾಷನಲ್ ಕಾಲೇಜಿನಲ್ಲಿ ಬಿ. ಎಸ್ಸಿ. ವ್ಯಾಸಂಗ ಮಾಡಿದ್ದಾರೆ. ಶಿಕ್ಷಣದ ಜತೆಗೆ ಫುಟ್‌ಬಾಲ್ ಹಾಗೂ ಬ್ಯಾಡ್ಮಿಂಟನ್‌ನಲ್ಲಿ ಅವರು ಉತ್ತಮ ಆಟಗಾರರಾಗಿದ್ದರು.

ಈ ಹಿಂದೆ 20 ತಿಂಗಳು ಮುಖ್ಯಮಂತ್ರಿಯಾಗಿದ್ದಾಗ ಹಾಸನ ಜಿಲ್ಲೆಯಲ್ಲಿ ಎಂಜಿನಿಯರಿಂಗ್, ವೈದ್ಯಕೀಯ, ಕೃಷಿ, ಪಶುವೈದ್ಯ, ನರ್ಸಿಂಗ್ ಕಾಲೇಜುಗಳನ್ನು ತೆರೆಯಲು ಕಾರಣರಾಗಿದ್ದರು.

ಗ್ರಾಮ ವಾಸ್ತವ್ಯ, ಜನತಾ ದರ್ಶನ, ಸಾರಾಯಿ ನಿಷೇಧದಂತಹ ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಜನಮನ್ನಣೆ ಗಳಿಸಿದ್ದರು.

ಕನಕಪುರ ಲೋಕಸಭೆ ಕ್ಷೇತ್ರದಲ್ಲಿ 1996ರಲ್ಲಿ ಗೆಲ್ಲುವ ಮೂಲಕ ರಾಜಕೀಯ ಪ್ರವೇಶಿಸಿದ ಕುಮಾರಸ್ವಾಮಿ, ನಂತರ 1998ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸೋತಿದ್ದರು. ಆನಂತರ 1999ರಲ್ಲಿ ಸಾತನೂರಿನಿಂದ ಸ್ಪರ್ಧಿಸಿದರೂ ಗೆಲುವು ಸಾಧಿಸಲಾಗಲಿಲ್ಲ.

2004ರಲ್ಲಿ ರಾಮನಗರದಿಂದ ಗೆಲ್ಲುವ ಮೂಲಕ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಬಳಿಕ 2009ರಲ್ಲಿ ಲೋಕಸಭೆಗೆ 2ನೇ ಬಾರಿಗೆ ಆಯ್ಕೆಯಾದರು. ನಂತರ ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಕುಮಾರಸ್ವಾಮಿ ಅಧಿಕಾರ ವಹಿಸಿಕೊಂಡರು.

ಆದರೆ ಬೆಂಗಳೂರು ಗ್ರಾಮಾಂತರ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಜೆಡಿಎಸ್ ಸೋಲು ಅನುಭವಿಸಿದ ಬಳಿಕ ಪಕ್ಷದ ಅಧ್ಯಕ್ಷಸ್ಥಾನ ಹಾಗೂ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕನ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ತದ ನಂತರ 2014 ರಿಂದ ಮತ್ತೆ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಹೆಗಲು ಕೊಟ್ಟು ಪಕ್ಷವನ್ನು ಸಂಘಟಿಸಿ ಈಗ ಅಧಿಕಾರದ ಗದ್ದುಗೆ ಏರುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ಚಲನಚಿತ್ರ ನಿರ್ಮಾಪಕರೂ ಆಗಿದ್ದು ಹಲವಾರು ಯಶಸ್ವಿ ಕನ್ನಡ ಚಿತ್ರಗಳನ್ನು ನಿರ್ಮಿಸಿದ ಖ್ಯಾತಿಗೂ ಪಾತ್ರರಾಗಿದ್ದಾರೆ.

ತಮ್ಮದೇ ಕಾರ್ಯವೈಖರಿ, ನಡವಳಿಕೆ ಹಾಗೂ ವೈಯಕ್ತಿಕ ಪ್ರಭಾವದಿಂದ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಯಶಸ್ವಿ ರಾಜಕಾರಣಿಯಾಗಿದ್ದಾರೆ.

ಪ್ರಸ್ತುತ ಸನ್ಮಾನ್ಯ ಮುಖ್ಯಮಂತ್ರಿಗಳು ಹಣಕಾಸು, ಮೂಲ ಸೌಕರ್ಯ ಅಭಿವೃದ್ಧಿ, ಗುಪ್ತಚರ ಹಾಗೂ ಇತರೆ ಖಾತೆಗಳೊಂದಿಗೆ ಇಂಧನ ಖಾತೆಯನ್ನೂ ಸಹ ನಿರ್ವಹಿಸುತ್ತಿರುತ್ತಾರೆ.

ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಬೆವಿಕಂನ ಎಲ್ಲಾ ಅಧಿಕಾರಿ ಹಾಗು ಸಿಬ್ಬಂದಿ ವರ್ಗದವರ ಅಭಿನಂದನೆಗಳು.

************************

# Message from Managing Director



BESCOM has taken up many new initiatives to serve its consumers to achieve the vision to become No.1 in Customer Satisfaction in South Asia in Power Distribution. We have taken steps to update the regular complaint attending works in the field & other regular works in Social Media, Facebook & Twitter. All the field level officers are hereby asked to update the day to day activities of their respective jurisdiction in Facebook & Twitter regularly.

After successful completion of Fast Track New Connection (FTNC) in BMAZ area up to 7.5 kW, the services of FTNC are now extended to rural areas also from 01.06.2018 onwards. Along with this even the HT Applications are being registered only through online mode under Ease of Doing Business. I am also glad to inform that the Temporary connections registration & process will also be brought under the FTNC services, the process is under development & will be implemented by July 2018.

I am also happy in sharing that the GoI directions of completing the electrification of Unelectrified households under Gram Swaraj Abhiyan has been completed 100% by BESCOM within the stipulated time. Under this scheme nearly 4,243 number of Households have been Electrified throughout the 8 districts in BESCOM within a timeline of 40 days which is a great achievement. I take this opportunity to congratulate all the field staff who had worked hard in completing this milestone.

At the same time focus shall be given on the other Government Schemes i.e., Electrification of BPL Households under DDUGJY Scheme & IP Set connection.

Finally, I urge all the field officers to show more interest & dedication in completing the Energy Audit up to DTC wise through which better distribution management is possible.

**P. Rajendra Cholan**
Managing Director

# ಸಂಪಾದಕೀಯ



ಆತ್ಮೀಯರೆ,

ಬಹಳ ವರ್ಷಗಳಿಂದ ಹವಾಮಾನದಲ್ಲಿ ಆದ ಬದಲಾವಣೆಗಳನ್ನು ಗಮನಿಸಿ ಜೂನ್ ತಿಂಗಳನ್ನೂ ಕೂಡ ಬೇಸಿಗೆ ಕಾಲದ ಲೆಕ್ಕಕ್ಕೇ ಸೇರಿಸಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ.

ಕಾರಣ ಜೂನ್‌ನಲ್ಲಿ ಅಪರೂಪಕ್ಕೆ ಒಂದೆರಡು ಮಳೆ ಬಿದ್ದರೆ ಮುಗಿಯಿತು. ಪ್ರಖರವಾದ ಬಿಸಿಲಿನ ಝಳಕ್ಕೆ ಎಲ್ಲವೂ ಒಣಗಿ ಹೋಗುತ್ತಿತ್ತು. ಹಾಗಾಗಿ ಹವಾಮಾನದ ಚಕ್ರ ಬದಲಾಗಿದೆ ಮಳೆ ಏನಿದ್ದರೂ ಜುಲೈನಲ್ಲೇ ಆರಂಭ ಎಂಬ ವಾಡಿಕೆಯ ಮಾತುಗಳು ಕೇಳಿಬರುತ್ತಿದ್ದವು.

ಇಂಥ ವಾತಾವರಣ ಕಾಣುವುದೇ ಇತ್ತೀಚಿನ ವರ್ಷಗಳಲ್ಲಿ ಅಪರೂಪವಾಗಿತ್ತು. ಆದರೆ ಇದಕ್ಕೆ ಅಪವಾದ ಎನ್ನುವಂತೆ ಬಹಳ ವರ್ಷಗಳ ನಂತರ ಈ ಬಾರಿ ಜೂನ್‌ನಲ್ಲಿಯೇ ಮಳೆ ರಾಜ್ಯಾದ್ಯಂತ ಧೋ ಎಂದು ಸುರಿದಿದ್ದು ಅತ್ಯಂತ ಶುಭಸೂಚಕವಾಗಿದ್ದು ಜನರ ಮನದಲ್ಲಿ ಸಂತಸ ಮೂಡಲು ಕಾರಣವಾಗಿದೆ. ಹಲವಾರು ವರ್ಷಗಳ ನಂತರ ಈ ಬಾರಿ ಜೂನ್‌ನಲ್ಲಿ ಜಲಾಶಯಗಳಿಗೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಆಶಾದಾಯಕವಾಗಿದೆ. ಕಬಿನಿ ಜಲಾಶಯ ಭರ್ತಿಯಾಗಿದ್ದರೆ, ಕೃಷ್ಣರಾಜಸಾಗರ ಅಣೆಕಟ್ಟು (ಕೆಆರ್‌ಎಸ್) ನೂರು ಅಡಿ ದಾಟಿದೆ (ಪೂರ್ಣ ಮಟ್ಟ 124 ಅಡಿ) ಸಾಮಾನ್ಯವಾಗಿ ಜುಲೈ ಅಥವಾ ಆಗಸ್ಟ್ ತಿಂಗಳ ಮಳೆಯಲ್ಲಿ ಕೆಆರ್‌ಎಸ್ ನೂರು ಅಡಿ ದಾಟುವುದು ಅಥವಾ ಭರ್ತಿಯಾಗುವುದು ವಾಡಿಕೆ. ಅದೇ ರೀತಿ ವಿದ್ಯುತ್ ಉತ್ಪಾದಿಸುವ ಜಲಾಶಯಗಳಿಗೂ ನೀರಿನ ಹರಿವು ಹೆಚ್ಚಾಗಿ ವಿದ್ಯುತ್ ಉತ್ಪಾದನೆಯ ಪ್ರಮಾಣ ಗರಿಷ್ಠ ಮಟ್ಟ ತಲುಪುತ್ತದೆ. ಅದನ್ನು ಕಾದು ನೋಡಬೇಕಾಗಿದೆ.

ಒಟ್ಟಾರೆ ಈ ಬಾರಿ ಮುಂಗಾರು ಮಳೆ ಆಶಾದಾಯಕವಾಗಿದೆ. ಜೂನ್ ತಿಂಗಳಿನಲ್ಲಿಯೇ ಭರವಸೆ ಮೂಡಿಸಿದೆ. ಮುಂದಿನ ತಿಂಗಳುಗಳಲ್ಲಿ ಉತ್ತಮ ಮಳೆ ಬಿದ್ದು ಜಲಾಶಯಗಳು ತುಂಬಿದರೆ ವಿದ್ಯುತ್ ಪರಿಸ್ಥಿತಿ ಸುಧಾರಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

ಆದರೆ ಮಳೆಗಾಲ "ಬೆಸ್ಕಾಂ" ಸೇರಿದಂತೆ ವಿದ್ಯುತ್ ಇಲಾಖೆಗೆ ಸವಾಲಿನ ಸಂದರ್ಭ. ಮಳೆ–ಗಾಳಿ ಬಿರುಸಾದಾಗ ಹಳೆಯ ಮರಗಳು ವಿದ್ಯುತ್ ಕಂಬಗಳ ಮೇಲೆ ಬೀಳುವುದು, ಕಂಬಗಳು ಉರುಳಿ ವಿದ್ಯುತ್ ಸಂಪರ್ಕ ಕಡಿತವಾಗುವುದು ಸರ್ವೇ ಸಾಮಾನ್ಯ. ಮಳೆಗಾಲದಲ್ಲಿ ಸಹಜವಾಗಿ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಅಗತ್ಯವಿರುವುದಿಲ್ಲ. ಗೃಹಬಳಕೆಯ ಗ್ರಾಹಕರಿಗೆ ಸಮರ್ಪಕವಾಗಿ ಲಭ್ಯವಿರುವ ವಿದ್ಯುತ್ ಅನ್ನು ಪೂರೈಸುವ ಜವಾಬ್ದಾರಿ ನಮ್ಮ ಮೇಲೆ ಇದೆ.

ಈ ಸಂದರ್ಭದಲ್ಲಿ "ಬೆಸ್ಕಾಂ" ಸಿಬ್ಬಂದಿ ಮತ್ತು ಅಧಿಕಾರಿಗಳು ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿ ಬಳಕೆದಾರರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸುವುದು ಆದ್ಯ ಕರ್ತವ್ಯವಾಗಬೇಕು.

ಮಳೆಗಾಲದಲ್ಲಿ ಗ್ರಾಹಕರಿಂದ ಬರುವ ದೂರುಗಳ ಪ್ರಮಾಣ ಕೂಡ ಹೆಚ್ಚಾಗಿರುತ್ತದೆ. ಅದನ್ನು ತಾಳ್ಮೆಯಿಂದ ಆಲಿಸಿ ಅವರ ಸಮಸ್ಯೆಗೆ ಸೂಕ್ತ ಪರಿಹಾರ ಒದಗಿಸುವುದು ನಮಗೆ ಸವಾಲಾಗಿರುತ್ತದೆ. ಅದು ನಮ್ಮ ಆದ್ಯ ಕರ್ತವ್ಯ ಕೂಡ ಆಗಿರುತ್ತದೆ. ಈ ನಿಟ್ಟಿನಲ್ಲಿ ತಾವೆಲ್ಲರೂ ಗಮನಹರಿಸಿ ಗ್ರಾಹಕರ ಕುಂದು–ಕೊರತೆಗಳಿಗೆ ಆದ್ಯತೆ ನೀಡುತ್ತೀರೆಂದು ಭಾವಿಸಿದ್ದೇನೆ.

ತಮ್ಮೆಲ್ಲರಿಗೂ ವರಮಹಾಲಕ್ಷ್ಮಿ ಹಾಗೂ ಗೌರಿ–ಗಣೇಶ ಹಬ್ಬದ ಶುಭಾಶಯಗಳು.

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು(ಗ್ರಾ. ಸಂ), ಬೆಸ್ಕಾಂ

# ನಮ್ಮ ಊರು, ನಮ್ಮ ಜಿಲ್ಲೆ – ಬೆಂಗಳೂರು ಗ್ರಾಮಾಂತರ ಜಿಲ್ಲೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ ನಗರ ಹಾಗೂ ಅರೆ ಗ್ರಾಮೀಣ ಪ್ರದೇಶಗಳಿಂದ ಕೂಡಿದೆ. ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಹಾಗೂ ನೆಲಮಂಗಲ, ನಾಲ್ಕು ತಾಲ್ಲೂಕುಗಳಿಂದ ಕೂಡಿರುವ ಈ ಜಿಲ್ಲೆಯ ಬಹುತೇಕ ಭೂ ಪ್ರದೇಶ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿದೆ.

ಬೆಂಗಳೂರು ಮಹಾನಗರದಿಂದ ತಾಲ್ಲೂಕು ಕೇಂದ್ರಗಳಿಗೆ ಬರುವ ಹೆದ್ದಾರಿಗಳ ಅಕ್ಕ–ಪಕ್ಕದ ರಸ್ತೆಗಳಲ್ಲಿ ಹೈಟೆಕ್ ಅಪಾರ್ಟಮೆಂಟ್‌ಗಳು, ಸಕಲ ಸೌಲಭ್ಯವಿರುವ ನೂತನ ಬಡಾವಣೆಗಳು ನಿರ್ಮಾಣವಾಗುತ್ತಿವೆ. ಭೂಮಿಗೆ ಬಂಗಾರದ ಬೆಲೆ ಬಂದಿದೆ. ಕೃಷಿಭೂಮಿ ಕ್ರಮೇಣ ಕಣ್ಮರೆಯಾಗುತ್ತಿದೆ. ಗ್ರಾಮೀಣ ಭಾಗದ ಜನ ನಗರದತ್ತ ಮುಖ ಮಾಡುತ್ತಿದ್ದಾರೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಉಜ್ಜನಿಬೆಟ್ಟ, ನೆಲಮಂಗಲ ತಾಲ್ಲೂಕಿನ ಶಿವಗಂಗೆ ಬೆಟ್ಟಸಾಲುಗಳು ಜಿಲ್ಲೆಯಲ್ಲಿವೆ. ನಾಲ್ಕು ತಾಲ್ಲೂಕುಗಳಲ್ಲೂ ವಾಣಿಜ್ಯ ಬೆಳೆಗಳು ಸೇರಿದಂತೆ ಹಣ್ಣು ತರಕಾರಿಗಳನ್ನು ಸಮೃದ್ಧವಾಗಿ ಬೆಳೆಯಲಾಗುತ್ತದೆ.

ಬೆಂಗಳೂರಿಗೆ ಅಗತ್ಯವಿರುವಷ್ಟು ಹಣ್ಣು ತರಕಾರಿ, ಹಾಲಿನ ಬಹುಭಾಗ ಸರಬರಾಜಾಗುವುದು ಗ್ರಾಮಾಂತರ ಜಿಲ್ಲೆಯ ತಾಲ್ಲೂಕುಗಳಿಂದ.

ಈ ಹಿಂದೆ ಈ ಜಿಲ್ಲೆಯ ಭಾಗವಾಗಿದ್ದ ಚನ್ನಪಟ್ಟಣ, ಕನಕಪುರ, ರಾಮನಗರ ಹಾಗೂ ಮಾಗಡಿ ತಾಲ್ಲೂಕುಗಳನ್ನು ಪ್ರತ್ಯೇಕಿಸಿ ರಾಮನಗರ ಜಿಲ್ಲೆಯನ್ನು ರಚಿಸಲಾಯಿತು.

ಜಿಲ್ಲೆಯ ಒಟ್ಟು ಜನಸಂಖ್ಯೆ ಸುಮಾರು 10 ಲಕ್ಷಕ್ಕೂ ಅಧಿಕ. ಈ ಜಿಲ್ಲೆ ಅಸ್ತಿತ್ವಕ್ಕೆ ಬಂದದ್ದು 1986ರ ಆಗಸ್ಟ್ 15ರಂದು. ಹಿಂದಿನ ಬೆಂಗಳೂರು ಜಿಲ್ಲೆಯನ್ನು ಆಡಳಿತದ ಅನುಕೂಲಕ್ಕಾಗಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಎಂದು ವಿಭಜಿಸಲಾಯಿತು.

ಉತ್ತರದಿಂದ ದಕ್ಷಿಣಕ್ಕೆ ಹರಿಯುವ ಅರ್ಕಾವತಿ, ಕಣ್ವ ಮತ್ತು ದಕ್ಷಿಣ ಪಿನಾಕಿನಿ ಜಿಲ್ಲೆಯ ನದಿಗಳು.

ದೇವನಹಳ್ಳಿಯಲ್ಲಿರುವ ಟಿಪ್ಪುಸುಲ್ತಾನನ ಜನ್ಮಸ್ಥಳ. ಕೋಟೆ, ದೊಡ್ಡಬಳ್ಳಾಪುರದಲ್ಲಿರುವ ಘಾಟಿ ಸುಬ್ರಹ್ಮಣ್ಯ, ಕನಸವಾಡಿಯ ಶನಿದೇವರು, ನೆಲಮಂಗಲ ತಾಲ್ಲೂಕಿನ ಶಿವಗಂಗೆ ಪ್ರಸಿದ್ಧ ಪ್ರವಾಸಿ ತಾಣಗಳು.

**ಘಾಟಿ ಸುಬ್ರಹ್ಮಣ್ಯ:** ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯ ನಾಗಾರಾಧನೆಗೆ ಹೆಸರುವಾಸಿಯಾದ ದಕ್ಷಿಣ ಭಾರತದ ಪ್ರಸಿದ್ಧ ಯಾತ್ರಾ ಸ್ಥಳಗಳಲ್ಲೊಂದು.

ಇಲ್ಲಿನ ಪ್ರಧಾನ ದೇವತೆ ಸುಬ್ರಹ್ಮಣ್ಯ ಸ್ವಾಮಿಯ ದರ್ಶನ ಪಡೆಯಲು ನಿತ್ಯ ಸಾವಿರಾರು ಜನ ಭಕ್ತಾಧಿಗಳು ಬರುತ್ತಾರೆ. ಈ ದೇವರ ವಿಶೇಷವೆಂದರೆ ಮುಂಭಾಗದಲ್ಲಿ ಸರ್ಪರೂಪ ಹಿಂಬದಿ ಕನ್ನಡಿಯಲ್ಲಿ ಲಕ್ಷ್ಮೀನರಸಿಂಹಸ್ವಾಮಿಯ ದರ್ಶನವಾಗುತ್ತದೆ. ಇದೊಂದು ಅಪರೂಪದ ಕ್ಷೇತ್ರ. ಹೀಗಾಗಿಯೇ ಇಲ್ಲಿಗೆ ಬರುವ ಭಕ್ತರ ಸಂಖ್ಯೆ ಹೆಚ್ಚು. ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಇಲ್ಲಿ ನಡೆಯುವ ಜಾತ್ರೆಯಲ್ಲಿ ದನಗಳನ್ನು ಮಾರಲು ಕೊಳ್ಳಲು ರಾಜ್ಯದ ನಾನಾ ಮೂಲೆಗಳಿಂದ ಮಾತ್ರವಲ್ಲದೆ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಕೇರಳದಿಂದಲೂ ರೈತರು ಬರುತ್ತಾರೆ.

**ಕನಸವಾಡಿಯ ಶನಿ ಮಹಾತ್ಮ :** ಕನಸವಾಡಿ ರಾಜ್ಯದ ಪ್ರಮುಖ ಶನಿದೇವರ ಕ್ಷೇತ್ರಗಳಲ್ಲಿ ಒಂದು. ಪಾವಗಡ ಶ್ರೀಶನಿದೇವರ ಕ್ಷೇತ್ರದಷ್ಟೇ ಪ್ರಸಿದ್ಧಿ ಪಡೆದಿದೆ. ಪ್ರತಿ ಶನಿವಾರ ಹಾಗೂ ಶ್ರಾವಣ ಮಾಸದ ಶನಿವಾರಗಳಂದು ಇಲ್ಲಿ ನಡೆಯುವ ವಿಶೇಷ ಪೂಜೆಗೆ ರಾಜ್ಯದ ನಾನಾ ಭಾಗಗಳಿಂದ ಭಕ್ತರು ಆಗಮಿಸುತ್ತಾರೆ.

ದೊಡ್ಡಬಳ್ಳಾಪುರ – ನೆಲಮಂಗಲ ರಸ್ತೆಯಲ್ಲಿರುವ ಕನಸವಾಡಿ ಕ್ಷೇತ್ರ ದೊಡ್ಡಬಳ್ಳಾಪುರದಿಂದ 18 ಕಿ.ಮೀ. ಹಾಗೂ ಬೆಂಗಳೂರಿನಿಂದ 40 ಕಿ.ಮೀ. ದೂರದಲ್ಲಿದೆ.

**ದಕ್ಷಿಣ ಕಾಶಿ ಶಿವಗಂಗೆ :** ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೆಬ್ಬಾಗಿಲು. ರಾಜ್ಯದ ಬಹುಪಾಲು ಜಿಲ್ಲೆಗಳಿಂದ ಗ್ರಾಮಾಂತರ ಜಿಲ್ಲೆಗೆ ಬರುವವರು ನೆಲಮಂಗಲದ ಮೂಲಕವೇ ಬರಬೇಕು.


ದಕ್ಷಿಣ ಕಾಶಿ ಎಂದೇ ಪ್ರಸಿದ್ಧವಾದ ಶಿವಗಂಗೆ ಈ ತಾಲ್ಲೂಕಿನಲ್ಲಿದೆ. ಶಿವಗಂಗೆ ವೈಷ್ಣವ, ಜೈನ, ಬೌದ್ಧ ಹಾಗೂ ಅದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳ ಸಮನ್ವಯ ಕ್ಷೇತ್ರ.

ಸಮುದ್ರ ಮಟ್ಟದಿಂದ 4547 ಅಡಿ ಎತ್ತರದಲ್ಲಿರುವ ಬೆಟ್ಟದ ತುದಿಯಲ್ಲಿ ಮಕರ ಸಂಕ್ರಾಂತಿಯ ದಿನ ಕುಂಭಿ ಮೇಲಿನ ತೀರ್ಥ ಕಂಬದ ಬುಡದಲ್ಲಿ ಗಂಗೋತ್ಪತ್ತಿಯಾಗುತ್ತದೆ. ಇದು ಶಿವಗಂಗೆಯ ವಿಶೇಷ.

ಬೆಟ್ಟದ ಗುಹಾಂತರ ದೇವಸ್ಥಾನದ ಪಾಣಿ ಬಟ್ಟಲಿನ ಮೇಲಿನ ಲಿಂಗ ಉದ್ಭವವಾದದ್ದು. ಈ ಲಿಂಗಕ್ಕೆ ತುಪ್ಪದ ಅಭಿಷೇಕ ಮಾಡಿದರೆ ಅದು ಬೆಣ್ಣೆಯಾಗುತ್ತದೆ. ಇದೂ ಕೂಡ ಅಲ್ಲಿನ ವಿಶೇಷ.

**ದೇವನಹಳ್ಳಿಯ ಕೋಟೆ :** ದೇವನಹಳ್ಳಿ ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಹೈದರಾಲಿ, ಟಿಪ್ಪುಸುಲ್ತಾನ್ ಹಾಗೂ ಬ್ರಿಟಿಷರವರೆಗೆ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ರಾಷ್ಟ್ರಕೂಟ, ನೊಳಂಬ, ಪಲ್ಲವರ, ಚೋಳ,





ಹೊಯ್ಸಳ ಮತ್ತು ವಿಜಯನಗರ ಅರಸರ ಆಡಳಿತಕ್ಕೂ ಒಳಪಟ್ಟಿತ್ತು. ಇಲ್ಲಿನ ಕೋಟೆ ಹಲವು ಆಡಳಿತ ವ್ಯವಸ್ಥೆಗಳ ಸಂಕೇತದಂತಿದೆ.

ದೀರ್ಘ ವೃತ್ತಾಕಾರದಲ್ಲಿ ನಿರ್ಮಿಸಿರುವ ಕೋಟೆ ಆಕರ್ಷಕವಾಗಿದೆ. ಕೆತ್ತನೆ ಕಲ್ಲುಗಳನ್ನು ಕೋಟೆ ನಿರ್ಮಾಣದಲ್ಲಿ ಬಳಸಲಾಗಿದೆ. ಮೂಲ ಗೋಡೆಯ ಸುತ್ತ ಒಳಭಾಗದಲ್ಲಿ ಮತ್ತೊಂದು ಕಲ್ಲಿನ ಆಸರೆ ಗೋಡೆ ನಿರ್ಮಿಸಿ ನಡುವಿನ 30 ಅಡಿ ಜಾಗದಲ್ಲಿ ಮಣ್ಣು ತುಂಬಿಸಲಾಗಿದೆ. ಕೋಟೆಯ ಮೇಲೆ ಕಾಲಾಳು, ಕುದುರೆಗಳು ಮತ್ತು ಫಿರಂಗಿ ಗಾಡಿಗಳು ಸರಾಗವಾಗಿ ಓಡಾಡಲು ಮಾಡಿದ ವ್ಯವಸ್ಥೆ ಇದು.

ಕೋಟೆಯೊಳಗೆ ಹಲವು ದೇವಸ್ಥಾನಗಳಿವೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮಾರ್ಗದಲ್ಲಿರುವುದರಿಂದ ಈ ಕೋಟೆಗೆ ಮಹತ್ವವಿದೆ.



## ಜ್ಞಾನಯೋಗಿ – ಬಸವಣ್ಣ



ವೈದಿಕ ಧರ್ಮ, 12ನೇ ಶತಮಾನದಲ್ಲಿ ಅತಿ ಅಮಾನುಷ ರೀತಿಯಲ್ಲಿ, ತನ್ನ ಜೀವವಿರೋಧಿ ಅನಿಷ್ಟ ರೂಢಿ – ಸಂಪ್ರದಾಯಗಳ, ವರ್ಣಾಶ್ರಮ ಅಥವಾ ಚಾತುರ್ವರ್ಣ ಪದ್ಧತಿಯ ಕಡ್ಡಾಯದ ಆಚರಣೆಗಳಿಂದಾಗಿ, ಸಮಾಜದ ಬಹು ಸಂಖ್ಯಾತ ಜನತೆಯನ್ನು ನಿರಂತರವಾಗಿ ವಿವಿಧ ರೀತಿಯಲ್ಲಿ ಶೋಷಣೆಗೆ ಒಳಪಡಿಸಿತ್ತು. ಆ ಕಾಲದಲ್ಲಿ ಬಸವಣ್ಣನವರ ಜನನ 1131ರಲ್ಲಿ ಬಾಗೇವಾಡಿಯಲ್ಲಿ ಆಯಿತು. ಇಂತಹ ಪರಿಸ್ಥಿತಿಯಲ್ಲಿ, ಸಕಲ ಜೀವಿಗಳಿಗೆ ಲೇಸ ಬಯಸುವಂತಹ, ಸಮಾಜದ ಎಲ್ಲ ರಂಗಗಳಲ್ಲಿ ಸರಿ ಸಮಾನತೆಯನ್ನು ಆಚರಿಸುವಂತಹ ಮಾನವೀಯ ಅಂಶಗಳನ್ನೊಳಗೊಂಡ, ನೂತನ ಸಾಮಾಜೋದ್ಧಾರಕ – ಧಾರ್ಮಿಕ ಸಂಘಟನೆಗೆ ಬಸವಣ್ಣನವರು ತಮ್ಮಂತಹ ಸಮಾನ ಚಿಂತಕರೊಂದಿಗೆ ಚಾಲನೆ ನೀಡಿದರು. ಅದೇ "ಲಿಂಗಾಯತ ಧರ್ಮ" ಎಂಬ ಹೆಸರಿನಿಂದ ಪ್ರಚಾರಕ್ಕೆ ಬಂದಿತು.

12ನೇ ಶತಮಾನದಲ್ಲಿ ಉದಯಿಸಿದ ಈ ಸಾಮಾಜೋ – ಧಾರ್ಮಿಕ ಆಂದೋಲನವನ್ನು ವಿದೇಶಿ ವಿದ್ವಾಂಸರೊಬ್ಬರು "ಲಿಂಗಾಯತಧರ್ಮ ಅಂದಿನ ಸಮಾಜದ, ಎಲ್ಲ ಅಂಕು ಡೊಂಕುಗಳನ್ನು ಸರಿಪಡಿಸಲು ಸರ್ವರೀತಿಯಿಂದಲೂ ಪ್ರಯತ್ನಿಸಿತು" ಎಂದಿದ್ದಾರೆ.

ಈ ಆಂದೋಲನದ ಹೊಣೆ ಹೊತ್ತ ಬಸವಣ್ಣನವರ ಸರಳತೆ, ಸಜ್ಜನಿಕೆ ಹಾಗೂ ನೊಂದವರ ಪರವಾದ ನೈಜ ಕಾಳಜಿ ಮುಂತಾದ ಗುಣಗಳಿಂದ ಜನತೆ ಪ್ರಭಾವಿತರಾಗಿ, ಬಸವಣ್ಣನವರನ್ನು ತಮ್ಮ ನಾಯಕನೆಂದು ಸ್ವೀಕರಿಸಿದರು.

ಆತ್ಮೀಯವಾಗಿ ತಮ್ಮ ಹಿರಿಯ ಅಣ್ಣನಿಗೆ ನೀಡುವ ಗೌರವ ನೀಡಿ "ಅಣ್ಣ ಬಸವಣ್ಣ" ಎಂದು ಕರೆದರು. ನಂತರದ ದಿನಗಳಲ್ಲಿ ಬಸವಣ್ಣನವರು, ಜನತೆಯಿಂದ "ಮಹಾತ್ಮಾ ಬಸವೇಶ್ವರ" ಎಂಬ ಗೌರವ ಪಡೆದುಕೊಂಡರು.

ಬಸವಣ್ಣನವರು ತಮ್ಮನ್ನು ತಾವು ಪ್ರವಾದಿ, ಗುರು, ಮಾರ್ಗದರ್ಶಕನೆಂದು ಹೇಳಿಕೊಳ್ಳದೆ 'ಎನ್ನ ಬಚ್ಚ ಬರಿಯ ಬಸವನೆನಿಸಯ್ಯ' ಎಂದು, 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ', ತಾನೊಬ್ಬನೇ ಭಕ್ತ, ಇನ್ನುಳಿದವರೆಲ್ಲರೂ ಜಂಗಮ – ಲಿಂಗ ಸ್ವರೂಪಿಗಳೆಂದು, ಶಿವಭಕ್ತರ ನಮ್ರ ಸೇವಕ, ದಾಸ ತಾವೆಂದು ಅನೇಕ ವಚನಗಳಲ್ಲಿ ವಿನಯ ಭಾವದೊಂದಿಗೆ ಅರಿಕೆ ಮಾಡಿಕೊಂಡಿದ್ದಾರೆ.

ಬಸವಣ್ಣನವರು ತಾವು ಹೊಗಳಿಕೆಗೆ ತಕ್ಕವರಲ್ಲ, ತಮಗೆ ಯಾವ ಅರ್ಹತೆಗಳೂ ಇಲ್ಲವೆಂದು, ತಮ್ಮ ಹೊಗಳಿಕೆಯನ್ನು ವಿನಯದಿಂದ ನಿರಾಕರಿಸುತ್ತಾರೆ. 'ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯ ನಿಮ್ಮ ಧರ್ಮ', 'ಎನ್ನವರೊಲಿದು ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ!, ಎಂದು ಅನೇಕ ವಚನಗಳಲ್ಲಿ ಹೇಳಿದ್ದಾರೆ.

ಬಸವಣ್ಣನವರು ತಾವೆಂದೂ ಉಚ್ಚ ಕುಲದವರೆಂದು, ದೊಡ್ಡವರೆಂದು ಹೇಳಿಕೊಳ್ಳಲಿಲ್ಲ. 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ, ಕಷ್ಟತನದ ಹೊರೆಯ ಹೊರಿಸದಿರಯ್ಯ', 'ಆನು ಹಾರುವನೆಂದಡೆ ಕೂಡಲ ಸಂಗಯ್ಯ ನಗುವನಯ್ಯ, ಎಂದಿದ್ದಾರೆ. ಅದಲ್ಲದೆ ಸಮಾಜ ಬಾಂಧವರು ಬಸವಣ್ಣನವರನ್ನು, ಇವನಾರವ, ಇವನಾರವನೆನ್ನದೆ, ಇವ ನಮ್ಮವ, ಇವ ನಮ್ಮವನೆಂದೆನಿಸೆಂದು ದೇವರಲ್ಲಿ ಬೇಡಿಕೊಳ್ಳುತ್ತಾರೆ.

************************

# ಆರೋಗ್ಯವೇ ಭಾಗ್ಯ – ಬಹೂಪಯೋಗಿ ಅರಿಸಿನ

**ಶುಭ ಕಾರ್ಯಗಳಲ್ಲಿ ಅರಿಸಿನಕ್ಕೆ ಬಹಳಷ್ಟು ಮಹತ್ವದ ಸ್ಥಾನ ಇದೆ.**

ಮಸಾಲೆ ಸಂಬಾರ ಪದಾರ್ಥಗಳಲ್ಲಿ ಒಂದಾದ ಅರಿಸಿನ ಅಡಿಗೆಯಲ್ಲಿ ಪ್ರತಿನಿತ್ಯವೂ ಉಪಯೋಗಿಸಲ್ಪಡುತ್ತದೆ.

ಅರಿಸಿನವು ಕಟು ಕಹಿ, ಉಷ್ಣಕಾರಿ, ಗಂಟಲು ನೋವು, ಕೆಮ್ಮು, ಶೀತ, ಚರ್ಮರೋಗ, ಮಧುಮೇಹ ಮತ್ತಿತರ ರೋಗ ನಿವಾರಕವೂ ಆಗಿದೆ. ಹುಣ್ಣು, ಗಾಯ, ಮೊಡವೆ ನಿವಾರಣೆ ಜತೆಗೆ ಮೈ ಚರ್ಮವನ್ನು ಕಾಂತಿಯುಕ್ತವಾಗಿಸುತ್ತದೆ. ಇದು ನಂಜು ನಿವಾರಕ (ಆ್ಯಂಟಿಸೆಪ್ಟಿಕ್), ಇದರ ಬಳಕೆಯಿಂದ ಆಹಾರ ಪದಾರ್ಥಗಳು ಕೆಡುವುದಿಲ್ಲ.

- **ಗಂಟಲು ನೋವು, ಗಂಟಲು ಬಾವು, ಗಂಟುಗಳ ನಿವಾರಣೆಗೆ:** ಶುದ್ಧ ಅರಿಸಿನ ಪುಡಿ ಅರ್ಧ ಚಮಚ, ಅದಕ್ಕೆ ಬೆಲ್ಲ, ಬೇಕಾಗುವಷ್ಟು ಹಾಲು ಸೇರಿಸಿ ಚೆನ್ನಾಗಿ ಪೇಸ್ಟಿನಂತೆ ಅರೆದುಕೊಳ್ಳಬೇಕು, ಅದನ್ನು ಗಂಟಲು ನೋವು, ಗಂಟುಗಳ ಭಾಗಕ್ಕೆ ಗುಣ ಕಂಡು ಬರುವವರೆಗೂ ಲೇಪನ ಮಾಡಬೇಕು,
- **ಕೆಮ್ಮು, ನೆಗಡಿ, ಉಸಿರಾಟದ ತೊಂದರೆಗೆ:** ಶುದ್ಧ ಅರಿಸಿನ ಪುಡಿ ಅರ್ಧ ಚಮಚ, ಅರ್ಧಕಪ್ಪು ಹಾಲಿನಲ್ಲಿ ಕಾಯಿಸಿ, ಅದಕ್ಕೆ ಚಿಟಿಕೆ ಕಾಳು ಮೆಣಸಿನ ಪುಡಿಯನ್ನು ಬೆರಸಿ ದಿನದಲ್ಲಿ ಎರಡು ಬಾರಿ ಕುಡಿಯಬೇಕು.
- **ಕಾಮಾಲೆ, ಜಾಂಡೀಸ್ ನಿವಾರಣೆಗೆ:** ಶುದ್ಧ ಅರಿಸಿನ ಪುಡಿ ಅರ್ಧ ಚಮಚ, ಒಂದು ಕಪ್ಪು ಮಜ್ಜಿಗೆಯಲ್ಲಿ ಚೆನ್ನಾಗಿ ಬೆರೆಸಿ, ಏಳುದಿನ ಬೆಳಿಗ್ಗೆಯೇ ಕುಡಿಯಬೇಕು. ಮಜ್ಜಿಗೆಗೆ ಉಪ್ಪು ಬೆರೆಸಬಾರದು. ಪಥ್ಯ: ಸಪ್ಪೆ ಆಹಾರ 10 ದಿನದವರೆಗೆ ಸೇವಿಸಬೇಕು.
- **ಗಾಯಗಳಿಗೆ, ರಕ್ತ ಸ್ರಾವವಾಗುತ್ತಿದ್ದರೆ ಹತೋಟಿಗೆ:** ಕೂಡಲೇ ಅರಿಸಿನ ಪುಡಿಯನ್ನು ಲೇಪನ ಮಾಡಿ ಬಟ್ಟೆ ಕಟ್ಟಬೇಕು. ರಕ್ತ ಸೋರುವುದು ನಿಂತು ಗಾಯವು ಕೂಡಲೆ ವಾಸಿಯಾಗುವುದು.



ಅರಿಸಿನ ಪುಡಿಗೆ ಬೇವಿನ ಎಲೆ ಪುಡಿಯನ್ನು ಮಿಶ್ರ ಮಾಡಿಕೊಂಡು ಯಾವುದೇ ರೀತಿಯ ಗಾಯವಾಗಿ ರಕ್ತ ಸೋರುತ್ತಿದ್ದರೆ ಈ ಪುಡಿಯ ಲೇಪನದಿಂದ ಉತ್ತಮ ಗುಣಕಂಡು ಬರುವುದು.

- **ಚರ್ಮರೋಗಗಳಿಗೆ, ಮೊಡವೆ, ಚಿಬ್ಬು ನಿವಾರಣೆಗೆ :** ಅರಿಸಿನ ಪುಡಿ ಒಂದು ಚಮಚ, ಒಂದು ಚಮಚ ಶ್ರೀಗಂಧದ ಪುಡಿಯನ್ನು ನಿಂಬೆಹಣ್ಣಿನ ರಸದಲ್ಲಿ ಚೆನ್ನಾಗಿ ಅರೆದು ಪೇಸ್ಟಿನಂತೆ ಮಾಡಿಕೊಂಡು ಮೊಡವೆ, ಚಿಬ್ಬು ಇತ್ಯಾದಿ ಚರ್ಮರೋಗಗಳಿಗೆ ಲೇಪನ ಮಾಡಬೇಕು. ಇದರಿಂದ ಚರ್ಮರೋಗ ನಿವಾರಣೆಯಾಗಿ ಚರ್ಮದ ಕಾಂತಿ ವೃದ್ಧಿಯಾಗುವುದು. ಶ್ರೀಗಂಧ ದೊರಕದಿದ್ದರೆ ಒಂದು ಚಮಚ ಕಡಲೆ ಹಿಟ್ಟನ್ನು ಬಳಸಬಹುದು.

# ಜೀರ್ಣ ಶಕ್ತಿ ಹೆಚ್ಚಿಸುವ ಏಲಕ್ಕಿ



ಏಲಕ್ಕಿಯು ಪ್ರತಿನಿತ್ಯ ನಾವು ಬಳಸುವಂತಹ ಸಾಂಬಾರ ಪದಾರ್ಥ. ಅನೇಕ ಆರೋಗ್ಯ ಸಹಕಾರಿ ಗುಣಗಳನ್ನು ಹೊಂದಿರುವುದು ಇದರ ವೈಶಿಷ್ಟ್ಯ. ಏಲಕ್ಕಿಯು ನಮ್ಮ ಜೀರ್ಣ ಶಕ್ತಿಯನ್ನು ಹೆಚ್ಚಿಸಲು ಬಹಳ ಸಹಕಾರಿ. ಅಜೀರ್ಣವಾಗುವ ಸಂಭವತೆಯಿದ್ದಲ್ಲಿ ಊಟವಾದ ನಂತರದಲ್ಲಿ ಅಥವಾ ಇನ್ನೇನೊ ಘನ ಆಹಾರ ಸೇವನೆಯ ನಂತರ ಏಲಕ್ಕಿಯನ್ನು ಸಿಪ್ಪೆಸಮೇತ ಜಗಿಯುವುದು ಉತ್ತಮ.

ಭಾರತೀಯ ಆಹಾರ ಪದ್ಧತಿಯ ಅಧ್ಯಯನಕಾರರು ಏಲಕ್ಕಿಯನ್ನು ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಬಳಸುವುದರ ಕುರಿತು ಸಂಶೋಧನೆ ನಡೆಸಿದ್ದು, ಏಲಕ್ಕಿಯು ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆಂಬುದನ್ನು ಸಾಬೀತುಪಡಿಸಿದ್ದಾರೆ. ಅಲ್ಲದೆ ಏಲಕ್ಕಿಯು ಭೇದಿಯನ್ನು ತಡೆಯಲು, ಆಮ್ಲೀಯತೆ ಹೆಚ್ಚಾಗುವುದನ್ನು ತಡೆಯಲೂ ಸಹಕಾರಿ. ಏಲಕ್ಕಿಯಲ್ಲಿನ ಆ್ಯಂಟಿ ಆಕ್ಸಿಡೆಂಟ್‌ಗಳು ಹೃದಯದ ಆರೋಗ್ಯವನ್ನು ವೃದ್ಧಿಸಲು ಸಹಕಾರಿ.

ಏಲಕ್ಕಿಯು ಸ್ವಲ್ಪ ಪ್ರಮಾಣದಲ್ಲಿ ನಾರಿನಾಂಶವನ್ನು ಹೊಂದಿದ್ದು, ಕೊಲೆಸ್ಟ್ರಾಲ್ ಪ್ರಮಾಣವನ್ನು ತಗ್ಗಿಸಿ ಹೃದಯದ ಆರೋಗ್ಯಕ್ಕೆ ಸಹಕರಿಸುತ್ತದೆ. ಅಲ್ಲದೆ ಅಧಿಕ ರಕ್ತದೊತ್ತಡವನ್ನು ನಿಯಂತ್ರಿಸುತ್ತದೆ. ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನ ವರದಿಯು ಏಲಕ್ಕಿಯು ಹೃದಯಕ್ಕೆ ಉತ್ತಮ ಎಂಬುದನ್ನು ಸಾಕ್ಷೀಕರಿಸಿದೆ. ಕ್ಯಾನ್ಸರ್ ಬರುವಂತಹ ಸಂಭವತೆಯನ್ನು ಏಲಕ್ಕಿ ಕಡಿಮೆ ಮಾಡುತ್ತದೆ. ಮೂತ್ರ ವರ್ಧಿಸುವ ಗುಣವನ್ನು ಏಲಕ್ಕಿ ಹೊಂದಿದ್ದು, ದೇಹವು ಶುದ್ಧವಾಗಲು ಸಹಕರಿಸುತ್ತದೆ. ಹೈಪರ್ ಟೆನ್ಷನ್ ಹಾಗೂ ಮೂರ್ಛೆರೋಗ ತಡೆಯುವಲ್ಲಿ ಏಲಕ್ಕಿ ಅನುಕೂಲಕಾರಿ. ಡಿಪ್ರೆಷನ್ ವಿರುದ್ಧ ಹೋರಾಡಲು, ಅಸ್ತಮಾದ ಪ್ರವಾಹವನ್ನು ಕಡಿಮೆಮಾಡಲು, ಉಸಿರಾಟ ಸರಾಗವಾಗಿ ಆಗುವಂತೆ ಮಾಡಲು, ಬಾಯಿಯ ಆರೋಗ್ಯವನ್ನು ಹೆಚ್ಚಿಸಲು (ಬಾಯಿಯ ದುರ್ಗಂಧ ನಿವಾರಕ), ಲೈಂಗಿಕಶಕ್ತಿ ಹೆಚ್ಚಿಸುವ, ಚರ್ಮದ ಆರೋಗ್ಯಕ್ಕೆ, ರಕ್ತಸಂಚಾರ ಹೆಚ್ಚಿಸಲು, ಕೂದಲಿನ ಆರೋಗ್ಯಕ್ಕೆ ಏಲಕ್ಕಿ ಸಹಕಾರಿ. ನಿಂಬೆ ರಸಕ್ಕೆ ಏಲಕ್ಕಿ ಪುಡಿಯನ್ನು ಹಾಕಿ ಕುಡಿದರೆ ವಾಂತಿ ಹಾಗೂ ತಲೆಸುತ್ತುವಿಕೆ ನಿಲ್ಲುವುದು, ಜೀರಿಗೆ ಕಷಾಯಕ್ಕೆ ಏಲಕ್ಕಿ ಪುಡಿಯನ್ನು ಬೆರೆಸಿ ಸೇವಿಸುವುದರಿಂದ ಪಿತ್ತ ಸಂಕಟ ನಿವಾರಣೆಯಾಗುತ್ತದೆ. ಪ್ರತಿ ದಿನ ಬಾಳೆಹಣ್ಣಿನೊಂದಿಗೆ ಒಂದು ಸಂಪೂರ್ಣ ಏಲಕ್ಕಿಯನ್ನು ತಿನ್ನುವುದರಿಂದ ಮೂಲವ್ಯಾಧಿ ಮತ್ತು ಮಲಬದ್ಧತೆ ದೂರವಾಗುವುದು.

# ಹಿರಿಯ ನಾಗರಿಕರಿಗೂ ಯೋಗ



ಯೋಗವನ್ನು ಯಾರ್‍ಯಾರೆಲ್ಲ ಮಾಡಬಹುದು? ಎಳೆಯರೇ, ಯುವಕರೇ, ನಡು ವಯೋಮಾನದವರೇ? ಹೌದು, ಆದರೆ ವೃದ್ಧರು ಎಂದಾಗ ನೂರೆಂಟು ಪ್ರಶ್ನೆಗಳು ಬರುತ್ತವೆ. ಚಿಂತೆ ಬೇಡ, ಆಧುನಿಕ ಜೀವನಶೈಲಿಯ ವಿಧಾನದಲ್ಲಿ ಹಿರಿಯ ನಾಗರಿಕರಿಗೆ ಕೆಲವೊಮ್ಮೆ ಜೀವನ ನಡೆಸಲು ಕಷ್ಟವಾಗುತ್ತದೆ. ವೇಗದ ಯುಗಕ್ಕೆ ಹೊಂದಿಕೊಳ್ಳಲು ಕಷ್ಟವಾಗುತ್ತದೆ. ವೃದ್ಧಾಪ್ಯವು ನಿಸರ್ಗದ ನಿಯಮ. ವೃದ್ಧಾಪ್ಯವನ್ನು ವಾಸಿಮಾಡಲು ಯಾರಿಂದಲೂ ಸಾಧ್ಯವಿಲ್ಲ. ಜೀವನದ ಪ್ರತಿಯೊಂದು ಹಂತದಲ್ಲಿಯೂ ಮನುಷ್ಯನಲ್ಲಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಅನೇಕ ಬದಲಾವಣೆಗಳಾಗುತ್ತವೆ. ಹಾಗಾಗಿ ಎಲ್ಲ ವಯೋಮಾನದವರಿಗೂ ಯೋಗವು ಸಂಜೀವಿನಿ. ಯೋಗವು ಸಾಧ್ಯ ಮತ್ತು ಸುಲಭ.

### ಹಿರಿಯರ ಸಮಸ್ಯೆಗಳು

ವಯಸ್ಸಾದಂತೆ ರಕ್ತದ ಒತ್ತಡ, ಮಧುಮೇಹ, ಸೊಂಟನೋವು, ಅಸ್ತಮಾ, ಕೆಮ್ಮು, ಜ್ಞಾಪಕಶಕ್ತಿ ಕುಂದುವುದು ಕಂಡು ಬರುತ್ತದೆ. ಎಲುಬಿನ ಸಾಂದ್ರತೆ ಕಡಿಮೆಯಾಗುತ್ತದೆ. ಶರೀರದ ಕೆಲವು ಭಾಗಗಳಲ್ಲೂ ಸವಕಲು ಉಂಟಾಗುವುದು. ಮೂತ್ರಕೋಶ ತೊಂದರೆ, ಖಿನ್ನತೆ ಇತ್ಯಾದಿ ಎದುರಾಗುತ್ತದೆ. ಕೌಟುಂಬಿಕ ಸಮಸ್ಯೆ ಹೈರಾಣ ಮಾಡಿರುತ್ತದೆ. ಆಗ ಖಂಡಿತ ಯೋಗಾಭ್ಯಾಸ ಬೇಕು.

### ಹೇಗೆ ಇರಬೇಕು?

ಹಿರಿಯ ನಾಗರಿಕರು ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕ್ರಿಯಾಶೀಲರಾಗಿ ಸಂತೋಷದಿಂದಿರಬೇಕು. ಇದಕ್ಕೆ ಸುಲಭ ಪರಿಹಾರ ಯೋಗ ಮತ್ತು ಮುದ್ರೆಗಳು. ಭಾರತೀಯ ಮೂಲದ ಯೋಗ, ಮುದ್ರೆಗಳನ್ನು ಅಳವಡಿಸಿಕೊಂಡಾಗ ಬದುಕಿನ ವಿವಿಧ ಹಂತಗಳನ್ನು ಸರಾಗವಾಗಿ ಕ್ರಮಿಸಲು ಸುಲಭ.

### ಏನೇನು ಮಾಡಬಹುದು?

ಹಿರಿಯ ನಾಗರಿಕರು ಯೋಗದಲ್ಲಿ ಏನು ಮಾಡಬಹುದು? ಸರಳ ವ್ಯಾಯಾಮಗಳು, ಚಿಕ್ಕ ನಡಿಗೆ, ಯೋಗಾಸನಗಳಲ್ಲಿ ತಾಡಾಸನ, ಅರ್ಧಚಕ್ರಾಸನ, ಪಾದಹಸ್ತಾಸನ, ಅರ್ಧಕಟಿಚಕ್ರಾಸನ, ಬದ್ಧಕೋಣಾಸನ, ಅರ್ಧ ಪದ್ಮಾಸನ/ ಪದ್ಮಾಸನ, ವಜ್ರಾಸನ, ಶಶಾಂಕಾಸನ, ಮಾರ್ಜಾಲಾಸನ, ಅರ್ಧಉಷ್ಟ್ರಾಸನ, ಉತ್ಥಿತ ಏಕಪಾದಾಸನ, ಪವನಮುಕ್ತಾಸನ, ಮಕರಾಸನ, ಭುಜಂಗಾಸನ, ಏಕಪಾದ ಶಲಭಾಸನ, ಶವಾಸನ ಇತ್ಯಾದಿ ಹಾಗೂ ಪ್ರಾಣಾಯಾಮ, ಧ್ಯಾನ ಮತ್ತು ಮುದ್ರೆಗಳು.

### ಮುದ್ರೆಗಳು

ಇದು ಅತ್ಯಂತ ಸುಲಭ ಮತ್ತು ಸರಳ. ಪ್ರಾಣ ಮುದ್ರೆ, ಚಿನ್ಮುದ್ರೆ, ಪೃಥ್ವಿಮುದ್ರೆ, ಆಕಾಶಮುದ್ರೆ, ಅಪಾನಮುದ್ರೆ, ವ್ಯಾನಮುದ್ರೆ ಇತ್ಯಾದಿಗಳನ್ನು ಕುಳಿತಲ್ಲೇ ಮಾಡಬಹುದು. ಯೋಗದ ಜೊತೆಯಲ್ಲಿ ಹಿರಿಯ ನಾಗರಿಕರು ಸಮತೋಲನ ಆಹಾರ ಸೇವಿಸಬೇಕು. ಸಕ್ಕರೆ, ಕೊಬ್ಬು ಹಾಗು ಉಪ್ಪನ್ನು ಮಿತವಾಗಿ ಸೇವಿಸಬೇಕು. ಹಣ್ಣುಹಂಪಲುಗಳನ್ನು ಸಾಕಷ್ಟು ಸೇವಿಸಬೇಕು. ಧಾನ್ಯಗಳು, ಬೇಳೆಕಾಳು, ಸೊಪ್ಪು–ತರಕಾರಿಗಳು ದೇಹಕ್ಕೆ ಹಿತಕಾರಿ. ವಯಸ್ಸಾದಂತೆ ಜೀರ್ಣಶಕ್ತಿ ಕಡಿಮೆಯಾಗುತ್ತಿರುತ್ತದೆ. ಹಾಗಾಗಿ ಚೆನ್ನಾಗಿ ಹಸಿವಾದಾಗಲೇ ಉಣ್ಣಬೇಕು. ಹಳೆಯ ಆಹಾರಗಳು, ಸಂಸ್ಕರಿಸಿದ ಪದಾರ್ಥಗಳು ವರ್ಜ್ಯ. ಈ ನಿಯಮ ಮೀರಿದರೆ ರೋಗ ಬರುವುದು ನಿಶ್ಚಿತ.

### ಏನೇನು ಬೇಕು?

ಅರವತ್ತು ವರ್ಷ ವಯಸ್ಸು ದಾಟಿದವರಿಗೆ ಏನೇನು ಬೇಕು? ಜೀವನವೇ ಸಾಕು ಎನ್ನಬೇಡಿ. ನಿಯತವಾದ ವೈದ್ಯಕೀಯ ತಪಾಸಣೆ, ಅಗತ್ಯವಿರುವ ಔಷಧ, ಉತ್ತಮ ಆಹಾರ ಪದ್ಧತಿ, ಕೆಲವು ಸರಳ ವ್ಯಾಯಾಮ ಕ್ರಿಯೆಗಳು, ಪ್ರಾಣಾಯಾಮ, ಧ್ಯಾನ ಅಳವಡಿಸಿಕೊಳ್ಳಬೇಕು. ಎಲ್ಲ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಹಾಗೂ ಕ್ರಿಯಾಶೀಲರಾಗಿ ಸಂತೋಷದಿಂದ ಜೀವನದ ಸಂಜೆಯನ್ನು ಅರಾಮವಾಗಿ ಕಳೆಯಲು ಸಾಧ್ಯ.

### ಹುಟ್ಟುಹಬ್ಬದ ಶುಭಾಶಯಗಳು

**2018ನೇ ವರ್ಷದ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.**

**– ಸಂಪಾದಕೀಯ ಮಂಡಳಿ**



### ಹಾರ್ದಿಕ ಬೀಳ್ಕೊಡುಗೆ

**ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2018ನೇ ವರ್ಷದ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.**

**– ಸಂಪಾದಕೀಯ ಮಂಡಳಿ**

# ವಿದ್ಯುತ್ ಸರಬರಾಜಿಗೆ ವಿತರಣಾ ಲೈಸೆನ್ಸ್‌ದಾರರ ಷರತ್ತುಗಳು

**....ಮುಂದುವರಿದ ಭಾಗ**

**9.05 ಕಟ್ಟಡವನ್ನು ಕೆಡವಿ ಮರು ನಿರ್ಮಾಣ ಮಾಡುವುದು**

ಕಟ್ಟಡವನ್ನು ಕೆಡವಿ ಮರು ನಿರ್ಮಾಣ ಮಾಡುವ ಪ್ರಕರಣಗಳಲ್ಲಿ ಹಾಲಿ ಸ್ಥಾಪನವನ್ನು ಲೈಸೆನ್ಸುದಾರರ ವಶಕ್ಕೆ ಸ್ವಾಧೀನಪಡಿಸತಕ್ಕದ್ದು ಮತ್ತು ಒಪ್ಪಂದದ ನಿವೇದನೆಯು ಅಂತ್ಯಗೊಳ್ಳುತ್ತದೆ. ಮಾಪಕ ಮತ್ತು ವಿದ್ಯುತ್ ಸಂಪರ್ಕ ಸೇವಾ ಮಾರ್ಗವನ್ನು ಕಳಚತಕ್ಕದ್ದು. ಪುನಾರಚಿಸಿದ ಕಟ್ಟಡವನ್ನು ಹೊಸ ಕಟ್ಟಡವೆಂದು ಪರಿಗಣಿಸಿ ಹೊಸದಾಗಿ ವಿದ್ಯುತ್ ಸೇವಾ ಸಂಪರ್ಕವನ್ನು ಮಾತ್ರ ನೀಡತಕ್ಕದ್ದು. ಅಂತಹ ಪ್ರಕರಣಗಳಲ್ಲಿ ಕಟ್ಟಡ ನಿರ್ಮಾಣದ ಪ್ರಯುಕ್ತ ಹಾಲಿ ಆರ್.ಆರ್. ಸಂಖ್ಯೆಯ ಮೂಲಕ ತಾತ್ಕಾಲಿಕ ವಿದ್ಯುತ್ ಸರಬರಾಜು ನೀಡತಕ್ಕದ್ದಲ್ಲ.

**9.06 ಆರ್.ಆರ್. ಸಂಖ್ಯೆ ನೀಡಿಕೆ ಮತ್ತು ಅಧಿಕ ಹೊರೆಯ ಮಂಜೂರಾತಿ**

ಬಹುಮಹಡಿ ಕಟ್ಟಡದ ಪ್ರಕರಣಗಳಲ್ಲಿ, ಸ್ಥಾಪನವು ಬಹುಮಹಡಿ ಕಟ್ಟಡ ಎಂದು ಗುರುತಿಸುವ ಸಲುವಾಗಿ, ಸ್ಥಾಪನಕ್ಕೆ ಆರ್.ಆರ್. ಸಂಖ್ಯೆ ನೀಡುವಾಗ, ಆರ್.ಆರ್. ಸಂಖ್ಯೆಯ ಪ್ರಾರಂಭದಲ್ಲಿ "ಎಂ.ಎಸ್." ಎಂಬ ಸಂಕ್ಷಿಪ್ತ ಪದವನ್ನು ಸೇರಿಸತಕ್ಕದ್ದು. ನಂತರದ ದಿನಗಳಲ್ಲಿ ಅಭಿವೃದ್ಧಿದಾರರು / ಪ್ರವರ್ತಕರು / ಮಾಲಿಕರು / ಅನುಭೋಗದಾರರು ಸ್ಥಾಪನಕ್ಕೆ ಅಧಿಕ ವಿದ್ಯುತ್ ಹೊರೆಯನ್ನು ಕೋರಿದರೆ, ಅಂತಹ ಗ್ರಾಹಕರು ಕಲಮು 9.00ರ ಷರತ್ತುಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಅಧಿಕ ಹೊರೆಯನ್ನು ಮಂಜೂರು ಮಾಡಬಹುದಾಗಿದೆ.

**9.07 ಕಲಮು 9.00 ಕ್ಕೆ ಅನ್ವಯಿಸುವ ಸಾಮಾನ್ಯ ಷರತ್ತುಗಳು**

1. ಅರ್ಜಿದಾರರು ಸ್ಥಾಪಿಸುವ ವಿತರಣಾ ಪರಿವರ್ತಕದ ಒಟ್ಟಾರೆ ಸಾಮರ್ಥ್ಯವು, ಕೋರಿರುವ ವಿದ್ಯುತ್ ಹೊರೆಯನ್ನು ಆಧರಿಸಿ ಹಾಗೂ ಭಾರತೀಯ ಗುಣಮಟ್ಟವು ಗೊತ್ತುಪಡಿಸಿರುವ ನಿರ್ದಿಷ್ಟ ಸಾಮರ್ಥ್ಯಕನುಗುಣವಾಗಿರತಕ್ಕದ್ದು ಮತ್ತು ಪರಿವರ್ತಕವು ಲೈಸೆನ್ಸುದಾರರಿಂದ ಅನುಮೋದಿಸಲ್ಪಟ್ಟ ತಯಾರಿಕೆಯಾಗಿರತಕ್ಕದ್ದು. ಉದಾ: ಬಹುಮಹಡಿ ಕಟ್ಟಡಕ್ಕೆ ಕೋರಿರುವ ವಿದ್ಯುತ್ ಹೊರೆಯ ಪ್ರಮಾಣ 75 ಕಿಲೋ ವಾಟ್ ಇದ್ದರೆ, ಪರಿವರ್ತಕದ ನಿರ್ಧರಿತ ಸಾಮರ್ಥ್ಯದ ಪ್ರಮಾಣವು ಲಭ್ಯವಿರುವ ನಂತರದ ಅಧಿಕ ಸಾಮರ್ಥ್ಯದ್ದಾಗಿರತಕ್ಕದ್ದು, ಅಂದರೆ 75 ಕಿ.ವಾ / 0.85 ವಿ.ಕಾ = 88 ಕೆವಿಎ ಅಥವಾ 100 ಕೆವಿಎ (ಭಾರತೀಯ ಗುಣಮಟ್ಟವು ಗೊತ್ತುಪಡಿಸಿರುವ ನಂತರದ ಅಧಿಕ ಸಾಮರ್ಥ್ಯ ಪ್ರಮಾಣ).
2. ಅರ್ಜಿದಾರರು, ತಾವು ಕೋರಿರುವ ವಿದ್ಯುತ್ ಹೊರೆಯ ಸರಬರಾಜನ್ನು ಪಡೆಯುವ ಸಲುವಾಗಿ, ಪ್ರಸಿದ್ಧ ತಯಾರಿಕೆಯ ಹಾಗೂ ಲೈಸೆನ್ಸುದಾರರು ನಿಗದಿಪಡಿಸಿರುವ ಸೂಕ್ತ ಅಳತೆಯ ಪ್ರಕಾರದ ಸೇವಾ ಮಾರ್ಗದ ಕೇಬಲ್ ಹಾಗೂ ಇತರ ಸಲಕರಣೆಗಳನ್ನು ಅತಿ ಹತ್ತಿರದ ವಿತರಣಾ ಮುಖ್ಯ ಮಾರ್ಗದಿಂದ ಅಥವಾ ಅವರ ಆವರಣದಲ್ಲಿರುವ ಪರಿವರ್ತಕದಿಂದ ಮಾಪಕ ಅಳವಡಿಸುವ ಬಿಂದುವಿನವರೆಗೆ ಅವರ ವೆಚ್ಚದಲ್ಲೇ ಅಳವಡಿಸುವ ವ್ಯವಸ್ಥೆಯನ್ನು ಮಾಡತಕ್ಕದ್ದು. ಹಾಲಿ ಕಟ್ಟಡಕ್ಕೆ ಹೆಚ್ಚುವರಿ ವಿದ್ಯುತ್ ಹೊರೆಯ ಅವಶ್ಯಕತೆ ಇದ್ದ ಪ್ರಕರಣದಲ್ಲಿ, ಗ್ರಾಹಕರು, ಆ ಹೊರೆಗೆ ಅನುಗುಣವಾಗಿ ಸೂಕ್ತ ಅಳತೆಯ ಹೊಸ ವಿದ್ಯುತ್ ಸರಬರಾಜು ಸೇವಾ ಮಾರ್ಗವನ್ನು ಅಳವಡಿಸಬೇಕಾಗುತ್ತದೆ.
3. ಸ್ವಯಂಕಾರ್ಯ ಯೋಜನೆಯ ಪ್ರಕರಣಗಳಲ್ಲಿ, ಬಹುಮಹಡಿ ಕಟ್ಟಡದ ಮಾಲಿಕರು / ಅನುಭೋಗದಾರರು ಕೆಳಗೆ ತಿಳಿಸಿರುವ ಷರತ್ತುಗಳಿಗೆ ಒಳಪಟ್ಟು, ಅಂದಾಜಿನ ಪ್ರಕಾರ, 11ಕೆವಿ ಮಾರ್ಗ / ಏರಿಯಲ್ ಬಂಚ್ ಕೇಬಲ್, ಪರಿವರ್ತಕ, ಎಲ್.ಟಿ.ಮಾರ್ಗ / ಏರಿಯಲ್ ಬಂಚ್ ಕೇಬಲ್ ವಿಸ್ತರಣೆ, ಇತರೆಗಳನ್ನೊಳಗೊಂಡಂತೆ ಸೇವಾ ಮಾರ್ಗದ ಕೆಲಸಗಳನ್ನು ಮಾಡಿಸತಕ್ಕದ್ದು.

ಎ) ಅಂದಾಜು ಮಾಡಲ್ಪಟ್ಟ ಮೊಬಲಗಿನ ಮೇಲೆ (ಸಿಬ್ಬಂದಿ ವೆಚ್ಚ, ಮಾಪಕ ಭದ್ರತಾ ಠೇವಣಿಯನ್ನು ಹೊರತುಪಡಿಸಿ) ಗರಿಷ್ಟ ರೂ.15 ಲಕ್ಷಕ್ಕೆ ಸೀಮಿತಗೊಳಿಸಿದಂತೆ, ಶೇ.10ರಂತೆ ಮೇಲ್ವಿಚಾರಣಾ ಶುಲ್ಕವನ್ನು ಲೈಸೆನ್ಸುದಾರರಿಗೆ ಪಾವತಿಸತಕ್ಕದ್ದು.

ಬಿ) ಕೆಲಸಗಳನ್ನು ವಿದ್ಯುತ್ ಪರವಾನಗಿ ಪಡೆದ ಸೂಕ್ತ ದರ್ಜೆಯ ವಿದ್ಯುತ್ ಗುತ್ತಿಗೆದಾರರ ಮೂಲಕ, ವಿತರಣಾ ಲೈಸೆನ್ಸುದಾರರು ದರ ಪಟ್ಟಿಯನ್ನು ಆಧರಿಸಿ ತಯಾರಿಸಿದ ಅಂದಾಜು, ನಿರ್ದಿಷ್ಟ ಗುಣಮಟ್ಟ ಹಾಗೂ ನಕಾಸೆಯ ಪ್ರಕಾರ ನಿರ್ವಹಿಸತಕ್ಕದ್ದು. ವಿದ್ಯುತ್ ವಾಹಕ / ಕೇಬಲ್ಲಿನ ಗಾತ್ರವು ಲೈಸೆನ್ಸುದಾರರು ಕಾಲಕಾಲಕ್ಕೆ ಗೊತ್ತುಪಡಿಸಿದಂತಿರತಕ್ಕದ್ದು.

ಸಿ) ಕೆಲಸಕ್ಕೆ ಉಪಯೋಗಿಸುವ ಸಾಮಗ್ರಿಗಳು ಭಾರತೀಯ ಮಾನಕ ಸಂಸ್ಥೆಯು ನಿರ್ದಿಷ್ಟಪಡಿಸಿರುವ ಪ್ರಮಾಣಕ್ಕೆ ಅನುಗುಣವಾಗಿರತಕ್ಕದ್ದು. ಕಂಬಗಳನ್ನು ಭೂಮಿಯೊಳಗೆ ಹೂಳುವ ಆಳ, ಕಂಬಗಳ ನಿಲ್ಲಿಸುವಿಕೆ, ಪರಿವರ್ತಕ ಕೇಂದ್ರದ ಸ್ಥಾಪನೆ, ತಂತಿಗಳಿಂದ ಬಿಗಿಯುವಿಕೆ ಇತ್ಯಾದಿ ಕೆಲಸಗಳು ಲೈಸೆನ್ಸುದಾರರ ಅಂಗೀಕೃತ ನಕ್ಷೆಯ ಪ್ರಕಾರ ಇರತಕ್ಕದ್ದು.

ಡಿ) ಪರಿವರ್ತಕ ಮತ್ತು ಸ್ವಿಚ್ಚುಗೇರುಗಳು ಪ್ರಸಿದ್ಧ ತಯಾರಿಕೆಯಾಗಿರತಕ್ಕದ್ದು ಮತ್ತು ಲೈಸೆನ್ಸುದಾರರು ಕಾಲಕಾಲಕ್ಕೆ ಅನುಮೋದಿಸಿದ ರೀತಿಗೆ ಅನುಗುಣವಾಗಿರತಕ್ಕದ್ದು. ಸ್ಥಾಪಿಸಿದ ಬಳಸಿದ ಪರಿವರ್ತಕ ಮತ್ತು ಸ್ವಿಚ್ಚುಗೇರುಗಳಿಗೆ ತಯಾರಿಕಾದಾರರಿಂದ ಪರೀಕ್ಷಾ ವರದಿಯನ್ನು ಪಡೆದು, ಅಂದಾಜನ್ನು ಮಂಜೂರು ಮಾಡಿದ ಸಕ್ಷಮ ಪ್ರಾಧಿಕಾರಿಯಿಂದ ಅನುಮೋದಿತಗೊಂಡಿರತಕ್ಕದ್ದು.

ಇ) ಕೆಲಸವು ಪೂರ್ಣಗೊಂಡ ನಂತರ, ಲೈಸೆನ್ಸುದಾರರು ಅರ್ಜಿದಾರ / ಅರ್ಜಿದಾರರ ಪ್ರತಿನಿಧಿಯೊಡನೆ ಜಂಟಿಯಾಗಿ ತಪಶೀಲು ವಿವರ ತೆಗೆದುಕೊಳ್ಳತಕ್ಕದ್ದು. ಕೈಗೊಂಡ ಕಾರ್ಯವು ಮಂಜೂರಾದ ಅಂದಾಜಿನ ಪ್ರಕಾರ ಇಲ್ಲದೆ ಅಪೂರ್ಣವಾಗಿದ್ದರೆ, ಅಥವಾ ಕೆಲಸದ ಗುಣಮಟ್ಟದಲ್ಲಿ ಕೊರತೆ ಕಂಡುಬಂದಿದ್ದರೆ, ಅರ್ಜಿದಾರರು ಅಂತಹವುಗಳನ್ನು ಸರಿಪಡಿಸತಕ್ಕದ್ದು. ಆಮೇಲೆ, ಲೈಸೆನ್ಸುದಾರರು ಯಾವುದೇ ಶುಲ್ಕವನ್ನು ಪಾವತಿಸದೆ, ಇಡೀ ಸೇವಾ ಮಾರ್ಗ, ಪರಿವರ್ತಕಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು. ನಿರ್ವಹಣೆಗೋಸ್ಕರ ಮಾರ್ಗ ಹಾಗೂ ಇನ್ನಿತರ ಸಲಕರಣೆಗಳ ಮಾಲಿಕತ್ವವು ಲೈಸೆನ್ಸುದಾರರದ್ದಾಗಿರುತ್ತದೆ.

ಎಫ್) ಸ್ಥಾಪನದ ಕೆಲಸಕ್ಕೆ ಉಪಯೋಗಿಸಿರುವ ಸಾಮಗ್ರಿಗಳು ಹಾಗೂ ಕೆಲಸದ ಗುಣಮಟ್ಟದ ಬಗ್ಗೆ, ಲೈಸೆನ್ಸುದಾರರು, ಮಾರ್ಗ ಹಾಗೂ ಇನ್ನಿತರ ಸಲಕರಣೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅರ್ಜಿದಾರರಿಂದ ಖಾತರಿಯನ್ನು ಪಡೆಯತಕ್ಕದ್ದು.

4. **ದಿನಾಂಕ 20.03.2008 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಕವಿನಿಆ: ಸಿಎಸ್: ಡಿ: 07: 08, ದಿನಾಂಕ 14.03.2008ರ ಪ್ರಕಾರ ತಿದ್ದುಪಡಿಗೊಂಡ ಆವೃತಿ.**

ಸುಲಭವಾಗಿ ಪ್ರವೇಶ ಮಾಡಲು ಅನುಕೂಲವಾಗುವಂತೆ ಮುಖ್ಯ ಪ್ರವೇಶ ದ್ವಾರದಲ್ಲಿ ಭೂಮಟ್ಟದಿಂದ 0.6 ಮೀಟರ್‌ನಿಂದ 1.6 ಮೀಟರ್ ಎತ್ತರದವರೆಗೆ ಲೈಸೆನ್ಸುದಾರರ ಮಾಪಕ ಸಲಕರಣೆಗಳು

ಹಾಗೂ ಮಾಪಕವನ್ನು ಅಳವಡಿಸಲು ನೆಲಮನೆಯಲ್ಲಿಯೇ ಸ್ಥಳಾವಕಾಶವನ್ನು ಒದಗಿಸತಕ್ಕದ್ದು. ಆದಾಗ್ಯೂ, ಇದು ಈಗಾಗಲೇ ವಿದ್ಯುತ್ ಸರಬರಾಜನ್ನು ಹೊಂದಿರುವ ಹಾಲಿ ಸ್ಥಾಪನಗಳಿಗೆ ಅನ್ವಯಿಸುವುದಿಲ್ಲ.

**ಹಳೆಯ ಆವೃತಿ:** ಸುಲಭವಾಗಿ ಪ್ರವೇಶ ಮಾಡಲು ಅನುಕೂಲವಾಗುವಂತೆ ನೆಲಮಾಳಿಗೆ / ತಳಮನೆಯ ಮುಖ್ಯ ಪ್ರವೇಶ ದ್ವಾರದಲ್ಲಿ ಭೂಮಟ್ಟದಿಂದ 0.6 ಮೀಟರ್‌ನಿಂದ 1.6 ಮೀಟರ್ ಎತ್ತರದವರೆಗೆ ಲೈಸೆನ್ಸುದಾರರ ಮಾಪಕ ಸಲಕರಣೆಗಳು ಹಾಗೂ ಮಾಪಕವನ್ನು ಅಳವಡಿಸಲು ಸ್ಥಳಾವಕಾಶವನ್ನು ಒದಗಿಸತಕ್ಕದ್ದು.

ಪ್ರತಿ ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಆಗುವ ಸರಬರಾಜು ಬಿಂದುವಿನಲ್ಲಿ ಅಂತ್ಯಗೊಳ್ಳುವಂತೆ ಪ್ರತ್ಯೇಕ ಸರ್ಕ್ಯೂಟನ್ನು ಎಳೆಯತಕ್ಕದ್ದು. ಪ್ಯಾನೆಲ್ ಫಲಕ, ಮತ್ತು ಸಾಮಾನ್ಯ ವಾಹಕ ವ್ಯೂಹಕ (ಬಸ್ ಬಾರ) ವ್ಯವಸ್ಥೆಯನ್ನು ಲೈಸೆನ್ಸುದಾರರು ಅನುಮೋದಿಸಿರುವ ಪ್ರಕಾರ ಅರ್ಜಿದಾರರು ತಮ್ಮ ವೆಚ್ಚದಲ್ಲೇ ಅಳವಡಿಸತಕ್ಕದ್ದು.

5. ಬದಲಿ ವಿದ್ಯುತ್ ಸರಬರಾಜು ಸೌಲಭ್ಯಕ್ಕಾಗಿ, ಅರ್ಜಿದಾರರು ಎರಡು ಮಾರ್ಗಗಳನ್ನು ಒದಗಿಸಿರತಕ್ಕದ್ದು. ವ್ಯವಸ್ಥೆಗಳು ಹೀಗಿರತಕ್ಕದ್ದು:

- ಬದಲಿ ಸರಬರಾಜಿಗಾಗಿ ಎರಡು ಮಾರ್ಗಗಳ ಕೇಬಲ್
- ವಿದ್ಯುತ್ ಸರಬರಾಜು ಆಗುವ ಕೇಬಲ್ಲಿನ ಅಂತ್ಯ ಭಾಗದಲ್ಲಿ ಚೇಂಜ್ ಓವರ್ ಸ್ವಿಚ್ಚು
- ಮಾಸ್ಟರ್ ಮೀಟರಿಂಗ್ ಕ್ಯುಬಿಕಲ್/ಮಾಸ್ಟರ್ ಮೀಟರ್
- ಕಳ್ಳತನ/ದುರ್ಬಳಕೆ ಆಗದಂತೆ ತಡೆಗಟ್ಟಲು ಎಲ್ಲ ಸಲಕರಣೆಗಳಿಗೂ ಮೊಹರು ಹಾಕುವ ಸೌಲಭ್ಯವಿರತಕ್ಕದ್ದು.

6. ಎಲ್ಲ ಸ್ಥಾಪನಗಳಿಗೂ ಸಮಾನವಾಗಿ ಅಳವಡಿಸಿರುವ ಒಂದೇ ಬಸ್ ಬಾರ್‌ನಲ್ಲಿ ಅಂತ್ಯಗೊಂಡಿರುವ ಸಾಮಾನ್ಯ ವಿದ್ಯುತ್ ಮಾರ್ಗದ ಮೂಲಕ ಕಟ್ಟಡಕ್ಕೆ ವಿದ್ಯುತ್ ಸರಬರಾಜು ಸೌಕರ್ಯ ಕಲ್ಪಿಸತಕ್ಕದ್ದು. ವೈಯಕ್ತಿಕ ಗ್ರಾಹಕರಿಗೆ, ಸಮಾನ ಬಸ್‌ಬಾರ್‌ನಿಂದ ಪ್ರತ್ಯೇಕ ಮಾಪಕವನ್ನು ಅಳವಡಿಸಿ ವಿದ್ಯುತ್ ಸರಬರಾಜು ಕಲ್ಪಿಸತಕ್ಕದ್ದು.

7. ಉತ್ತಮ ಆಯ್ಕೆ (selectivity) ಯನ್ನು ಹೊಂದಲು ಗ್ರಾಹಕ / ಅರ್ಜಿದಾರರು ಅವರವರ ಸ್ಥಾಪನಕ್ಕೆ ಪ್ರತ್ಯೇಕ ಎಂ.ಸಿ.ಸಿ.ಬಿ / ಇ.ಎಲ್.ಸಿ.ಬಿ.ಯನ್ನು ಸ್ಥಾಪಿಸಿರತಕ್ಕದ್ದು. ಮೇಲೆ ನಮೂದಿಸಿದ ಇ.ಎಲ್.ಸಿ.ಬಿ.ಯನ್ನು ಪ್ರತಿ ಸ್ಥಾಪನದ ಆವರಣದ ಪ್ರವೇಶ ದ್ವಾರದ ಬಳಿ ಸ್ಥಾಪಿಸತಕ್ಕದ್ದು.

8. **ದಿನಾಂಕ 20.03.2008 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಕವಿನಿಆ: ಸಿಎಸ್: ಡಿ: 07: 08, ದಿನಾಂಕ 14.03.2008ರ ಪ್ರಕಾರ ತಿದ್ದುಪಡಿಗೊಂಡ ಆವೃತಿ.**

ಹೊರೆಯ ಲೆಕ್ಕಾಚಾರದ ಉದ್ದೇಶಕ್ಕಾಗಿ, ಕಿಲೋವ್ಯಾಟ್‌ನ ಭಾಗಾಂಶವನ್ನು ನಂತರದ ಅಧಿಕ ಕಿಲೋವ್ಯಾಟ್‌ಗೆ ಪೂರ್ಣಾಂಕಗೊಳಿಸತಕ್ಕದ್ದು.

**ಹಳೆಯ ಆವೃತಿ:** ಲೆಕ್ಕಾಚಾರದ ಉದ್ದೇಶಕ್ಕಾಗಿ, ಹೊರೆಯ ಭಾಗಾಂಶವನ್ನು ಕಿಲೋ ವ್ಯಾಟ್‌ನ ಹತ್ತಿರದ ಕಾಲು ಭಾಗಕ್ಕೆ ಪೂರ್ಣಗೊಳಿಸತಕ್ಕದ್ದು. ಉದಾ: (i) 7.1 ಕಿ.ವ್ಯಾಟ್ ಅನ್ನು 7.0 ಕಿ.ವ್ಯಾಟ್‌ಗೆ ಪೂರ್ಣಾಂಕಗೊಳಿಸುವುದು (ii) 7.15 ಕಿ.ವ್ಯಾಟ್ ಅನ್ನು 7.25 ಕಿ.ವ್ಯಾಟ್‌ಗೆ ಪೂರ್ಣಾಂಕಗೊಳಿಸುವುದು.

9. ಮಂಜೂರಾದ ಹೊರೆ 25 ಕಿಲೋ ವ್ಯಾಟ್ ಅಥವಾ ಅಧಿಕವಾಗಿರುವ ಅಥವಾ ಕಟ್ಟಡದ ನಿರ್ಮಿತ ಪ್ರದೇಶ 500 ಚದರ ಮೀಟರುಗಳಿಗಿಂತ ಅಧಿಕವಾಗಿದ್ದು, ಕಲಮು 9.00ರ ಅಡಿಯಲ್ಲಿ ವಿದ್ಯುತ್ ಸರಬರಾಜು ಮಂಜೂರಾಗಿರುವ ಎಲ್ಲ ಕಟ್ಟಡಗಳ ವಿದ್ಯುತ್ ಪರಿಶೋಧನೆ ಮಾಡಲು ಲೈಸೆನ್ಸುದಾರರು ತಮ್ಮ ವೆಚ್ಚದಲ್ಲೇ ಬಲ್ಕ್ ಚೆಕ್ ಮೀಟರನ್ನು ಒದಗಿಸಿರತಕ್ಕದ್ದು.

**9.08 ಮಿಶ್ರ ಹೊರೆ**

i) ಕಲಮು 9.00ರ ಅಡಿಯಲ್ಲಿ ಒಳಪಡುವ ಕಟ್ಟಡದಲ್ಲಿ ನಿವಾಸಿ / ವಾಣಿಜ್ಯ ಹೊರೆಯ ಜೊತೆಗೆ ಭಾಗಶಃ ಕೈಗಾರಿಕಾ ಹೊರೆ ಇದ್ದರೆ, ಅಂತಹ ಪ್ರಕರಣಗಳಲ್ಲಿ ಇಡೀ ಕಟ್ಟಡಕ್ಕೆ ಅವಶ್ಯವಿರುವ ವಿದ್ಯುತ್ ಹೊರೆಯನ್ನು ಪರಿಗಣಿಸಿ, ಕಲಮು 9.00 ರಲ್ಲಿನ ಸೂಕ್ತ ಕಲಮನ್ನು ಅನ್ವಯಿಸತಕ್ಕದ್ದು. ಆದರೂ, ಕಲಮು 7.00 ರ ಪ್ರಕಾರ ಪ್ರತ್ಯೇಕ ಮಾಪಕವನ್ನು ಅಳವಡಿಸಿ, ವಾಸ್ತವಿಕ ವಿದ್ಯುತ್ ಹೊರೆಯ ಅಗತ್ಯತೆಯನ್ನು ಅವಲಂಬಿಸಿ, ಕೈಗಾರಿಕಾ ಹೊರೆಗೆ, ಪ್ರತ್ಯೇಕವಾಗಿ ವಿದ್ಯುತ್ ಸರಬರಾಜನ್ನು ನೀಡಬಹುದಾಗಿದೆ.

ii) ಪೂರ್ಣವಾಗಿ, ಕೈಗಾರಿಕಾ ಸ್ಥಾಪನಗಳಿಗಾಗಿಯೇ ಉಪಯೋಗಿಸುವ ಕಟ್ಟಡಗಳನ್ನು ಕಲಮು 9.00 ರ ನಿಯಮಗಳ ಅನ್ವಯಿಸುವಿಕೆಯಿಂದ ಹೊರತುಪಡಿಸಲಾಗಿದೆ. ಆದರೂ, ನಂತರದ ದಿನಗಳಲ್ಲಿ ಈ ಕೈಗಾರಿಕಾ ಸ್ಥಾಪನಗಳಿಗೆ ನೀಡುತ್ತಿರುವ ವಿದ್ಯುತ್ ಸರಬರಾಜನ್ನು ವಾಣಿಜ್ಯ / ಗೃಹಬಳಕೆ ಉದ್ದೇಶಗಳಿಗೆ ಬದಲಾಯಿಸಿದರೆ, ಕಲಮು 9.00 ರ ನಿಯಮಗಳು ಅನ್ವಯಿಸುತ್ತವೆ. ಇದು ಕಲಮು 42.02 ರ ಅಡಿಯಲ್ಲಿ ವಿಧಿಸುವ ದಂಡ ಅನ್ವಯಿಸುವಿಕೆಯ ಜೊತೆಗೆ ಹೆಚ್ಚುವರಿ ಸೇರ್ಪಡೆಯಾಗಿದೆ.

**9.09 ಮಿಶ್ರ ಹೊರೆ ಇರುವ ಕಟ್ಟಡಕ್ಕೆ ಮಾಪಕ ಅಳವಡಿಕೆ**

ಎ) ಕವಿನಿ ಆಯೋಗ (ವಿದ್ಯುತ್ ಸರಬರಾಜಿನ ವೆಚ್ಚಗಳ ವಸೂಲಿ) ನಿಬಂಧನೆಗಳು, 2004 ಮತ್ತು ಕಾಲಕಾಲಕ್ಕೆ ಇದರ ತಿದ್ದುಪಡಿಗಳು (ಅನುಬಂಧ–2)ರ ಕಲಮು 3.1.1ರ ಟಿಪ್ಪಣಿ (ಬಿ)ಯಲ್ಲಿ ವಿವರಿಸಿರುವಂತೆ, ಎಚ್.ಟಿ. ಸರಬರಾಜು ಅಡಿಯಲ್ಲಿ ಬರುವ ನಿವಾಸಿ ಕಟ್ಟಡಗಳಲ್ಲಿ, ವಾಣಿಜ್ಯ ಪ್ರದೇಶದ ಹೊರೆ ಇರುವ ಸ್ಥಳಗಳಲ್ಲಿ ಎಲ್.ಟಿ. ಭಾಗದಲ್ಲಿ ಒಂದು ಬಲ್ಕ್ ಎನರ್ಜಿ ಮಾಪಕವನ್ನು (ಉಪ–ಮಾಪಕ) ಅಳವಡಿಸತಕ್ಕದ್ದು ಹಾಗೂ ಉಪ–ಮಾಪಕದಲ್ಲಿ ದಾಖಲಾದ ವಿದ್ಯುತ್ ಪ್ರಮಾಣಕ್ಕೆ ಸೂಕ್ತ ಎಲ್.ಟಿ. ವಾಣಿಜ್ಯ ದರವನ್ನು ವಿಧಿಸತಕ್ಕದ್ದು. ಈ ಬಲ್ಕ್ ಎನರ್ಜಿ ಮಾಪಕದಲ್ಲಿ (ಉಪ–ಮಾಪಕ) ದಾಖಲಾದ ವಿದ್ಯುತ್ ಪ್ರಮಾಣವನ್ನು ಮುಖ್ಯ ಎಚ್.ಟಿ. ಮೀಟರಿನಲ್ಲಿ ದಾಖಲಾದ ವಿದ್ಯುತ್ ಬಳಕೆಯಿಂದ ಕಳೆದು ಉಳಿದ ವಿದ್ಯುತ್ (ಗೃಹ ಬಳಕೆ ಹೊರೆಗೆ ಸಂಬಂಧಿಸಿದುದು) ಪ್ರಮಾಣವನ್ನು, ನಿವಾಸಿ ಅಪಾರ್ಟ್‌ಮೆಂಟುಗಳಿಗೆ ಅನ್ವಯಿಸುವ ಅನ್ವಯಿತ ಎಚ್.ಟಿ. ವಿದ್ಯುತ್ ದರದ ಪ್ರಕಾರ ಬಿಲ್ ಮಾಡತಕ್ಕದ್ದು. ಮುಖ್ಯ ಮಾಪಕದಲ್ಲಿ ದಾಖಲಾದ ಬೇಡಿಕೆಯಲ್ಲಿ ಕಳೆಯತಕ್ಕದ್ದಲ್ಲ.

ಬಿ) ಕವಿನಿ ಆಯೋಗ (ವಿದ್ಯುತ್ ಸರಬರಾಜಿನ ವೆಚ್ಚಗಳ ವಸೂಲಿ) ನಿಬಂಧನೆಗಳು, 2004 ಮತ್ತು ಕಾಲಕಾಲಕ್ಕೆ ಇದರ ತಿದ್ದುಪಡಿಗಳು (ಅನುಬಂಧ–2)ರ ಕಲಮು 3.1.1ರ ಟಿಪ್ಪಣಿ (ಸಿ)ಯಲ್ಲಿ ವಿವರಿಸಿರುವಂತೆ, ಎಚ್.ಟಿ. ಸರಬರಾಜು ಅಡಿಯಲ್ಲಿ ಬರುವ ವಾಣಿಜ್ಯ ಕಟ್ಟಡಗಳಲ್ಲಿ, ನಿವಾಸಿ ಪ್ರದೇಶಗಳ ಹೊರೆ ಇರುವ ಸ್ಥಳಗಳಲ್ಲಿ ಎಲ್.ಟಿ. ಭಾಗದಲ್ಲಿ ಒಂದು ಬಲ್ಕ್ ಎನರ್ಜಿ ಮಾಪಕವನ್ನು (ಉಪ–ಮಾಪಕ) ಅಳವಡಿಸತಕ್ಕದ್ದು ಹಾಗೂ ಉಪ ಮಾಪಕದಲ್ಲಿ ದಾಖಲಾದ ವಿದ್ಯುತ್ ಪ್ರಮಾಣಕ್ಕೆ ನಿವಾಸಿ ಅಪಾರ್ಟ್‌ಮೆಂಟುಗಳಿಗೆ ಅನ್ವಯಿಸುವ ಸೂಕ್ತ ಎಚ್.ಟಿ. ದರವನ್ನು ವಿಧಿಸತಕ್ಕದ್ದು. ಈ ಬಲ್ಕ್ ಎನರ್ಜಿ ಮಾಪಕದಲ್ಲಿ (ಉಪ–ಮಾಪಕ) ದಾಖಲಾದ ವಿದ್ಯುತ್ ಪ್ರಮಾಣವನ್ನು ಮುಖ್ಯ ಎಚ್.ಟಿ. ಮೀಟರಿನಲ್ಲಿ ದಾಖಲಾದ ವಿದ್ಯುತ್ ಬಳಕೆಯಿಂದ ಕಳೆದು ಉಳಿದ ವಿದ್ಯುತ್ (ವಾಣಿಜ್ಯ ಪ್ರದೇಶದ ಹೊರೆಗೆ ಸಂಬಂಧಿಸಿದುದು) ಪ್ರಮಾಣವನ್ನು, ಅನ್ವಯಿತ ಎಚ್.ಟಿ. ವಾಣಿಜ್ಯ ದರದ ಪ್ರಕಾರ ಬಿಲ್ ಮಾಡತಕ್ಕದ್ದು. ಮುಖ್ಯ ಮಾಪಕದಲ್ಲಿ ದಾಖಲಾದ ಬೇಡಿಕೆಯಲ್ಲಿ ಕಳೆಯತಕ್ಕದ್ದಲ್ಲ.

**ಮುಂದುವರೆಯುವುದು....**

# ಐಸ ಪದ ಮತ್ತು ಐಸ್ಸ

ಈಗ ಕಠಿಣ ಮತ್ತು ಭಾರದ ತೂಕ ಎತ್ತುವಂತಹ, ಎಳೆಯುವಂತಹ ಕೆಲಸವನ್ನು ಮಾಡಲು ಕ್ರೇನ್, ಟಿಪ್ಪರ್ ನಂತಹ ಯಂತ್ರೋಪಕರಣಗಳಿವೆ. ಆದರೆ ಎಂ.ಎಸ್.ಇ.ಬಿ ಮತ್ತು ಕೆ.ಇ.ಬಿ ಇದ್ದಕಾಲದಲ್ಲಿ ಮಾನವ (ಗುಂಪು) ಬಲದಿಂದ ಕಂಬ ಎತ್ತುವ, ಪರಿವರ್ತಕ ಎತ್ತುವ ಮತ್ತು ನಿರ್ವಾಹಕ ತಂತಿಯನ್ನು ಎಳೆಯುವ ಕೆಲಸವನ್ನು ಎತ್ತಿನಗಾಡಿಯ ಸಹಾಯದಿಂದ, ಮಾನವ ತೋಳ್ಬಲದಿಂದ ಮಾಡಬೇಕಾಗಿತ್ತು. ಇದು ಕಠಿಣ ಕೆಲಸವಾದ್ದರಿಂದ ಹೆಚ್ಚಿನ ಕೆಲಸಗಾರರು ಯುವಕರೇ ಆಗಿರುತ್ತಿದ್ದರು.

ಅಷ್ಟೂ ನೌಕರರ ಶಕ್ತಿಯನ್ನು (ಬಲ) ಕೂಡಿಸಿ, ಒಂದೇ ದಿಕ್ಕಿನಲ್ಲಿ ಬಲ ಪ್ರಯೋಗಿಸಿ ಕಠಿಣ ಕೆಲಸ ಮುಗಿಸಲು ಐಸ ಪದ ಬಳಸಲಾಗುತ್ತಿತ್ತು. ಪ್ರತಿಸಾಲಿನ ಕೊನೆಯಲ್ಲಿ ಕೆಲಸಗಾರರ ಗುಂಪು ಒಕ್ಕೊರಲಿನಿಂದ ಗಟ್ಟಿಯಾಗಿ "ಐಸ" ಎಂದು ಕೂಗುತ್ತಾ, ಒಟ್ಟಾಗಿ ಎಲ್ಲರೂ ಒಂದೇ ಬಾರಿ ಕೈಗಳಿಂದ ಭಾರ ಎತ್ತುವ ಅಥವಾ ಭಾರ ಎಳೆಯುವ ಕೆಲಸ ಮಾಡಬೇಕಾಗಿತ್ತು.

ಸಾಮಾನ್ಯವಾಗಿ ಐಸ ಪದದ ಒಂದು ಸಾಲನ್ನು ಮಾತ್ರ ಜೋರಾಗಿ ಹೇಳುತ್ತಿದ್ದರೂ. ಕೆಲಸಗಾರರು ಪ್ರತಿ ಸಲ "ಐಸ" ಕೂಗಿ ಸಂಘಟಿತ ಶಕ್ತಿ ಹಾಕಿ ಕೆಲಸ ಮಾಡಿದಾಗ, ಕಂಬ, ಪರಿವರ್ತಕ ಅಥವಾ ನಿರ್ವಾಹಕ ಭಾರದ ತಂತಿಗಳು ಸ್ವಲ್ಪ ಸ್ವಲ್ಪ ಮೇಲಕ್ಕೆ ಸಾಗಿ ಕೊನೆಗೆ ಅದರದರ ನಿಯೋಜಿತ ಸ್ಥಾನದಲ್ಲಿ ಕೂರಿಸಲಾಗುತ್ತಿತ್ತು.

ಹೆಚ್ಚಿನ ಐಸ ಪದಗಳು ಹೆಣ್ಣಿನ ವರ್ಣನೆ ಬಗ್ಗೆ ಇರುತ್ತಿತ್ತು. ಅನುಭವಿ ಮೇಸ್ತ್ರಿ "ಐಸ" ಪದ ಹೇಳುತ್ತಿದ್ದರೆ, "ಐಸ" ಎಂದು ಕೂಗುತ್ತಾ, ಗುಂಪಿನಲ್ಲಿ ಯುವ ಕೆಲಸಗಾರರು ಒಳಗೊಳಗೆ ನಗುತ್ತಾ, ಸಂತೋಷದಿಂದ, ಐಕ್ಯತೆಯಿಂದ ಕೆಲಸ ಪೂರ್ಣಗೊಳಿಸುತ್ತಿದ್ದರು. ಈ "ಐಸ" ಪದ ಮೇಸ್ತ್ರಿ ಮತ್ತು ನೌಕರರ ಭಾಂದವ್ಯವನ್ನು ಭದ್ರವಾಗಿಸುತ್ತಿತ್ತು.

ಆಯಾಸ ಮರೆಸಿ, ಸಂತೋಷ ಮೆರೆಸಿ, ಕಾರ್ಯ ಪೂರ್ಣಗೊಳಿಸುತ್ತಿದ್ದ "ಐಸ" ಪದ ಇಂದು ಮರೆಯಾಗಿದೆ.

ಒಂದು "ಐಸ ಪದ" "ಮಾಲೂರ್ ಮಲ್ಲಿ"

| | |
|---|---|
| ಮೇಸ್ತ್ರಿ – ಏರಿ ಮಲ್ಲಿ | ನೌಕರರು....... ಐಸ್ಸ |
| ಮೇಸ್ತ್ರಿ – ಮಾಲೂರು ಮಲ್ಲಿ | ನೌಕರರು....... ಐಸ್ಸ |
| ಮೇಸ್ತ್ರಿ – ಕಾಲುಕು ವಲ್ಲಿ | ನೌಕರರು....... ಐಸ್ಸ |
| ಮೇಸ್ತ್ರಿ – ಗೆಜ್ಜೆಡಾಬು | ನೌಕರರು....... ಐಸ್ಸ |
| ಮೇಸ್ತ್ರಿ – ಮೂಗ್ತಿ, ಜುಮ್ಕಿ | ನೌಕರರು....... ಐಸ್ಸ |
| ಮೇಸ್ತ್ರಿ – ಜಡೆಗೆ ಮಲ್ಗೆ | ನೌಕರರು....... ಐಸ್ಸ |
| ಮೇಸ್ತ್ರಿ – ಲಂಗ ದಾವಣೆ | ನೌಕರರು....... ಐಸ್ಸ |
| ಮೇಸ್ತ್ರಿ – ಬತ್ತಾವ್ಳೆ ನೋಡು | ನೌಕರರು....... ಐಸ್ಸ |
| ಮೇಸ್ತ್ರಿ – ಗೆಜ್ಜೆ ಗಲ್‌ಗಲ್ | ನೌಕರರು....... ಐಸ್ಸ |
| ಮೇಸ್ತ್ರಿ – ಬಳಕು ನೋಡು | ನೌಕರರು....... ಐಸ್ಸ |
| ಮೇಸ್ತ್ರಿ – ಸೊಂಟದಲ್ಲಿ ಬಿಂದಿಗೆ | ನೌಕರರು....... ಐಸ್ಸ |
| ಮೇಸ್ತ್ರಿ – ಬಿಂದಿಗೇಲಿ ನೀರು | ನೌಕರರು....... ಐಸ್ಸ |
| ಮೇಸ್ತ್ರಿ – ಕುಡಿಯಾಕ್ ನಮ್ಗೆ | ನೌಕರರು....... ಐಸ್ಸ |
| ಮೇಸ್ತ್ರಿ – ಕೊಡ್ತಾಳೆ ನೀರು | ನೌಕರರು....... ಐಸ್ಸ |

ಈ ಐಸ ಪದದಲ್ಲಿ ಸುಂದರ ಕನ್ಯೆ "ಮಾಲೂರು ಮಲ್ಲಿ" ಕಾವ್ಯರೂಪದಲ್ಲಿ ಒಂದು ಕೆಲಸಗಾರರ ಮನಕೆ ಶೃಂಗಾರ ಭಾವ ಚೆಲ್ಲಿ, ಪದದ ಕೊನೆಯಲ್ಲಿ ನೀರುಣಿಸಿ ದಣಿವಾರಿಸಿ ಹೋಗುತ್ತಾಳೆ.

**ಸಾಹಿತ್ಯರಚನೆ**
[ಬಿ. ಕೆ ರವಿರಾಜ್ (ಕವಿ)]
ಕಿರಿಯ ಅಭಿಯಂತರರು (ವಿ)
ಪಾಲನಾ ಶಾಖೆ, ನಿಗಮ ಕಛೇರಿ

# ಕವನ – ವರ್ಷಧಾರೆ



ಮುಸ್ಸಂಜೆಯ ಕಾರ್ಮೋಡದಿಂದ
ಧರೆಗಿಳಿದಳು ವರ್ಷಧಾರೆ
ಮುತ್ತಿನ ಹನಿಗಳಾಗಿ
ಸ್ಪರ್ಶಿಸಿದವು ನಮ್ಮಿಬ್ಬರನು

ಸುಂದರ ಅನುಭವ ಮಳೆಯಲಿ ಮಿಂದು
ಜೊತೆಯಲಿ ನೀನಿರಲು ಹನಿಗಳಾದವು ಅಮೃತ ಬಿಂದು

ತಂದಿತು ಇನ್ನಿಲ್ಲದ ಸಂತೋಷ ನನಗೆ ಆ ಕ್ಷಣ
ನಿನ್ನ ಸುಮಧುರ ಮೊಗವ ನೋಡಿ
ನನ್ನ ಮನ ಹಿಗ್ಗಿತು, ನಾ ಕಂಡೆ ನಿನ್ನ ಹೊಳೆವ
ನಯನದಲಿ ಮಿಂಚಿನ ಕಿರಣ

ಸಾಕ್ಷಿಯಾಯಿತು ಸಂಜೆಯೊಂದರ ಆ ಘಳಿಗೆ
ತುಂತುರು ಸುರಿದ ವರ್ಷಧಾರೆ ಹೂ ಮಳೆಗೆ

**ನಂದೀಶ್ ಸಿ.ಪಿ**
ಸ. ಕಾ. ಇಂಜಿನಿಯರ್ (ಐ.ಟಿ ಮತ್ತು ಎಂ.ಐ.ಎಸ್)
ಬೆ.ವಿ.ಕಂ., ನಿಗಮ ಕಾರ್ಯಾಲಯ

# ಇವರು ನಮ್ಮ ಸಾಹಿತಿಗಳು



ಪು.ತಿ.ನರಸಿಂಹಾಚಾರ್

"ಪು.ತಿ.ನ" ಎಂಬ ಕಾವ್ಯನಾಮದಿಂದ ಪ್ರಖ್ಯಾತರಾದ ಪು. ತಿ. ನರಸಿಂಹಾಚಾರ್ ಕನ್ನಡದ ಹೆಸರಾಂತ ಸಾಹಿತಿ.

ಇವರ ಮಾತೃಭಾಷೆ ತಮಿಳು ಆದರೆ ಓದಿದ್ದು ಸಂಸ್ಕೃತ ಮತ್ತು ಇಂಗ್ಲೀಷ್ ಆದರೂ ಕನ್ನಡದ ಬಗ್ಗೆ ಅಪಾರ ಪ್ರೀತಿ, ಅಭಿಮಾನ. ಅದನ್ನು ತಮ್ಮ ಕೃತಿಗಳ ಮೂಲಕ ಕಾರ್ಯರೂಪಕ್ಕೆ ತಂದು ಖ್ಯಾತ ಸಾಹಿತಿಗಳಲ್ಲಿ ಒಬ್ಬರಾದರು.

ಮಂಡ್ಯ ಜಿಲ್ಲೆಯ ಪ್ರಸಿದ್ಧ ಪುಣ್ಯಕ್ಷೇತ್ರ ಮೇಲುಕೋಟೆಯಲ್ಲಿ 1905ರ ಮಾರ್ಚ್ 17ರಂದು ಜನಿಸಿದರು. ತಂದೆ ಪುರೋಹಿತ ತಿರುನಾರಾಯಣ ಆಚಾರ್ಯ, ತಾಯಿ ಶ್ರೀರಂಗಮ್ಮ. ಇವರದು ಸಂಸ್ಕೃತ, ವೇದ ವಿದ್ಯಾಭ್ಯಾಸ, ಸಂಗೀತ ಪ್ರೇಮ ತುಂಬಿ ತುಳುಕುತ್ತಿದ್ದಂತಹ ಮನೆತನ.

ಪು.ತಿ.ನ ಅವರು ಮಾಧ್ಯಮಿಕ ಶಾಲೆಯ ಶಿಕ್ಷಣವನ್ನು ಮೇಲುಕೋಟೆಯಲ್ಲಿಯೇ ಮುಗಿಸಿದರು. ನಂತರ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸಿ ಬಿ.ಎ. ಪದವಿ ಪಡೆದರು.

ತಮ್ಮ ಶಿಕ್ಷಣ ಮುಗಿಸಿದ ನಂತರ 1926ರಲ್ಲಿ ಇನ್ಸ್‌ಪೆಕ್ಟರ್ ಆಫ್ ಚೀಫ್ ಕಮಾಂಡರ್ ಕಚೇರಿಯಲ್ಲಿ ತಮ್ಮ ವೃತ್ತಿಯನ್ನು ಆರಂಭಿಸಿದರು. 1952 ರಿಂದ 1961 ರವರೆಗೆ ಮೈಸೂರಿನ ಶಾಸನ ಸಭೆಯಲ್ಲಿ ಸಂಪಾದಕರಾಗಿ ಕೆಲಸ ಮಾಡಿದರು.

1963 ರಿಂದ 66 ರವರೆಗೆ ಕನ್ನಡ ವಿಶ್ವಕೋಶದ ಕಚೇರಿಯಲ್ಲಿ ಭಾಷಾಂತರಕಾರರಾಗಿದ್ದರು.

1966 ರಿಂದ 71 ರವರೆಗೆ ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ್ ಕನ್ನಡ ನಿಘಂಟು ಕಚೇರಿಯಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿದರು.

ಪು.ತಿ.ನ ಅವರದು ತುಂಬಾ ಮೃದು ಸ್ವಭಾವದ ವ್ಯಕ್ತಿತ್ವ. ಇವರ ಪತ್ನಿ ಶೇಷಮ್ಮ ಪತಿ ಬಗೆಗಿನ ಅಪಾರ ಪ್ರೀತಿ ಜತೆಗೆ ಅವರ ಕಾವ್ಯ ಕೃಷಿಗೆ ಒತ್ತಾಸೆಯಾಗಿ ನಿಂತರು. ಅವರದು ಒಟ್ಟು ಎಂಟು ಮಕ್ಕಳ ತುಂಬು ಕುಟುಂಬ. ಅವರಿಗೆ ಸಂಗೀತದ ಬಗ್ಗೆಯೂ ಅಪಾರ ಆಸಕ್ತಿ. ಸರಳ ಜೀವಿ ಹಾಗೂ ಭಾವ ಜೀವಿಯೂ ಹೌದು. ಅವರ ಉಡುಪು ಸರಳ ಕಚ್ಚೆ ಪಂಚೆ, ಹೆಗಲ ಮೇಲೆ ಶಾಲು ಧರಿಸಿ ತಲೆಗೊಂದು ಟೋಪಿ. ಅದು ಆಗಿನ ಕಾಲದಲ್ಲಿ ಬ್ರಿಟಿಷರ ಆಡಳಿತದಲ್ಲಿ ನಮ್ಮ ಸಂಸ್ಕೃತಿಯನ್ನು ಕವಿ ಹೇಗೆ ಅಳವಡಿಸಿಕೊಂಡಿದ್ದರು ಎಂಬುದಕ್ಕೆ ಸಾಕ್ಷಿ.

ಒಂದು ಮಹಾಕಾವ್ಯ, ಹತ್ತು ಕವನ ಸಂಕಲನ, ಹತ್ತು ಗೀತರೂಪಕಗಳನ್ನು ರಚಿಸಿದ್ದಾರೆ. ಹಾಗೆಯೇ ಕೆಲವು ರೂಪಕಗಳನ್ನು ಪುಸ್ತಕ ರೂಪದಲ್ಲಿಯೂ ಪ್ರಕಟಿಸಿದ್ದಾರೆ. ಆರು ಪ್ರಬಂಧಗಳು, ಕಥೆಗಳು, ನಾಟಕ, ಏಳು ಅನುವಾದ ಕೃತಿಗಳನ್ನು ಬರೆದಿದ್ದಾರೆ.

ಅವರ ಅನೇಕ ಗೀತರೂಪಕಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ. ಅವರ ಎಲ್ಲ ಕವನಗಳನ್ನು ಒಟ್ಟಿಗೆ ಸೇರಿಸಿ "ಪು. ತಿ. ನ ಸಮಗ್ರ ಕವನ" ಎಂಬ ಶೀರ್ಷಿಕೆಯಡಿ ಪ್ರಕಟಿಸಲಾಗಿದೆ.

ಇವರ "ಹಂಸ ದಮಯಂತಿ ಮತ್ತು ಇತರ ರೂಪಕಗಳು" ಕೃತಿಗೆ 1966ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಅದೇ ವರ್ಷ ರಾಜ್ಯ ಸಾಹಿತ್ಯ ಅಕಾಡೆಮಿ ಸನ್ಮಾನ ದೊರೆಯಿತು.

1971ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪದವಿ, 1990ರಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದರು. 1984ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ 53ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1991ರಲ್ಲಿ ಅವರ 'ಹರಿಚರಿತೆ' ಕಾವ್ಯಕೃತಿಗೆ ಪಂಪ ಪ್ರಶಸ್ತಿ ಲಭಿಸಿತು.

ಹೀಗೆ ಸರಳ ಸಜ್ಜನಿಕೆಯ ಸಾಕಾರಮೂರ್ತಿ ಎನಿಸಿಕೊಂಡು ಕನ್ನಡದ ಅಮೂಲ್ಯ ರತ್ನಗಳಲ್ಲಿ ಒಬ್ಬರಾಗಿದ್ದ ಪು.ತಿ.ನ ಅವರು 1998ರ ಅಕ್ಟೋಬರ್ 13 ರಂದು ನಿಧನರಾದರು.

---


ಕನ್ನಡ ಸಾಹಿತ್ಯಲೋಕ ಕಂಡ ಪ್ರಕಾಂಡ ಪಂಡಿತರಲ್ಲಿ ತೀ.ನಂ. ಶ್ರೀಕಂಠಯ್ಯ ಒಬ್ಬರು. "ತೀನಂಶ್ರೀ" ಎಂದೇ ಹೆಸರಾದ ಅವರು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಸಮೀಪದ ತೀರ್ಥಪುರದಲ್ಲಿ 1906ರ ನವೆಂಬರ್ 26 ರಂದು ಜನಿಸಿದರು.

ತಂದೆ ಶಾನುಭೋಗ ನಂಜುಂಡಯ್ಯ, ತಾಯಿ ಭಾಗೀರಥಮ್ಮ. ಇವರ ವಿದ್ಯಾಭ್ಯಾಸ ಚಿಕ್ಕನಾಯಕನಹಳ್ಳಿ, ತುಮಕೂರು, ಮೈಸೂರುಗಳಲ್ಲಿ ನಡೆಯಿತು.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಪದವಿ ಪಡೆದು, ನಂತರ ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಎಂ.ಎ. ಸ್ನಾತಕ ಪದವಿ ಪಡೆದರು.

ಕೆಲವು ಕಾಲ ತಹಶಿಲ್ದಾರ್ ಹುದ್ದೆಯಲ್ಲಿ ಸೇವೆ ಸಲ್ಲಿಸಿದ ಅವರು ನಂತರ 1928 ರಿಂದ 1952ರ ವರೆಗೆ ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

1960ರಲ್ಲಿ ಅಖಿಲಭಾರತ ಭಾಷಾ ವಿಜ್ಞಾನ ಮಂಡಳಿಯ ಅಧ್ಯಕ್ಷರಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕ ಸಮಿತಿಯ ಕಾರ್ಯದರ್ಶಿ, ಪ್ರಧಾನ ಸಂಪಾದಕ ಹಾಗೂ ಅಧ್ಯಕ್ಷರಾಗಿ ದುಡಿದರು.



ತೀ.ನಂ. ಶ್ರೀಕಂಠಯ್ಯ


ತೀನಂಶ್ರೀ ಅವರ 'ಒಲುಮೆ' ಹೊಸಗನ್ನಡದಲ್ಲಿ ಪ್ರಥಮವಾಗಿ ಪ್ರಕಟಗೊಂಡ ಪ್ರೇಮ ಗೀತೆಗಳ ಸಂಕಲನ.

ಪಂಪ, ನಂಬಿಯಣ್ಣನ ರಗಳೆ, ಭಾರತೀಯ ಕಾವ್ಯ ಮೀಮಾಂಸೆ, ಕನ್ನಡ ಗದಾಯುದ್ಧ ಅವರ ಪ್ರಮುಖ ಕೃತಿಗಳು.

ತೀನಂಶ್ರೀ ಅವರು ತರಗತಿಯಲ್ಲಿ ಪಾಠ ಹೇಳುತ್ತಿದ್ದ ಶೈಲಿ ತುಂಬ ಸೊಗಸಾಗಿತ್ತಂತೆ ಬೇರೆ ತರಗತಿಯ ವಿದ್ಯಾರ್ಥಿಗಳು ಸಹ ಇವರು ಪಾಠ ಮಾಡುವ ಶೈಲಿಯಿಂದ ಆಕರ್ಷಿತರಾಗಿ ಇವರ ತರಗತಿಗೆ ಬಂದು ಪಾಠ ಕೇಳುತ್ತಿದ್ದರಂತೆ.

ಕರ್ನಾಟಕ ಸರ್ಕಾರ ನೀಡುವ ಪಂಪ ಪ್ರಶಸ್ತಿಯನ್ನು ಇವರ "ಭಾರತೀಯ ಕಾವ್ಯ ಮೀಮಾಂಸೆ" ಕೃತಿಗೆ 1988ರಲ್ಲಿ ಮರಣೋತ್ತರವಾಗಿ ನೀಡಲಾಯಿತು

ತೀನಂಶ್ರೀ ಅವರು 1966ರಲ್ಲಿ ನಿಧನರಾದರು.





## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಿ. ರಾಜೇಂದ್ರ ಚೋಳನ್,** ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಡಾ. ಆರ್.ಸಿ. ಚೇತನ್** ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀ ವೆಂಕಟೇಶ್ ಕುಮಾರ್ .ವಿ** ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ಎನ್. ಪ್ರಕಾಶ್ ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಎಚ್.ಆರ್. ರಾಜಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪ.ಜಾತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಎಸ್ಕಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ. ಸಂಘ | **ಸದಸ್ಯರು** |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ


ವಿಳಾಸ: **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.),ನಿಗಮ ಕಾರ್ಯಾಲಯ, ಬಿ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **gmcr@bescom.co.in**


**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**

Printed at : Poornima Printers, Ph. 080 - 23359588